ಎಲ್ಲರೂ ಒಂದು ಎಕರೆ ಒಳಗೆ ಇರುವವರೇ, ಅದರಲ್ಲಿ ಒಬ್ಬರದ್ದು ಮಾತ್ರ 3 ಎಕರೆ 38 ಗುಂಟೆ ಇದೆ. ನಾನು ಇದನ್ನು ಸೇರಿಸುವುದಕ್ಕೆ ಒಲ್ಲೆ. ಆಗ ಅವರು ಹೇಳಿದರು ಇಲ್ಲಾ ಸಾರ್ ಚಿಕ್ಕತಾಯಪ್ಪ ಎಂಬಾತನಿಗೆ 107 ವರ್ಷ ವಯಸ್ಸಾಗಿದೆ ಅವರ ಮನೆಯಲ್ಲಿ ಕೇವಲ 45-50 ಜನ ಇದ್ದಾರೆ ಅಷ್ಟು ಜನರಿಗೆ ಅವತ್ತಿನ ರೇಟ್‌ನಲ್ಲಿ ಭಾರಿ ಕಡಿಮೆ ಪರಿಹಾರ. ನಾನು ಏಕೆ ಹೇಳುತ್ತೇನೆ ಎಂದರೆ ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಜಾಲಪ್ಪನವರನ್ನು ಅಭಿನಂದಿಸುತ್ತೇನೆ ಈ ವಿಚಾರದಲ್ಲಿ ಗುಣಕ್ಕೆ ಮತ್ಸರ ಪಡತಕ್ಕಂಥಾದ್ದು ಅಲ್ಲ. ರೈತರ ಪರ ನಿಂತವರು. ಇದು ಹೇಗೆ ಅಂದ್ರೆ ಇದು ಅರ್ಥವಾಗಬೇಕಾದರೆ ನಾನು ಹೇಳಿಬಿಡುತ್ತೇನೆ.

ಈ ಡಿ ಆರ್ ಡಿ ಒ ನವರು ತೆಗೆದುಕೊಂಡಿರುವುದು ಕಬ್ಬನ್ ಪಾರ್ಕ್ ಎಂದು ಇಟ್ಟುಕೊಳ್ಳಿ ಅದು ಈಗ ಅವರು ಇರುವ ಸ್ಥಳ. ಆಮೇಲೆ ಇಲ್ಲಿ ಈ ಕಗ್ಗದಾಸನ ಪುರ ನಾರಾಯಣಪುರ ಈ ವಿಧಾನ ಸೌಧಕ್ಕೆ ಬಂದಂಗೆ ಆಗುತ್ತದೆ. ಬೆಂಡಿಗಾನಹಳ್ಳಿ ಈಗ ನೋಟಿ ಫೈ ಮಾಡಿರುವುದು ರಾಜಭವನಕ್ಕೆ ಬಂದಂತೆ ಆಗುತ್ತದೆ. ಎಂದರೆ ಅವರು ಬೆಂಡಿಗಾನ ಹಳ್ಳಿಗೆ ಏನಾದರೂ ಬರಬೇಕಾದರೆ ಕಗ್ಗದಾಸನಪುರ ನಾರಾಯಣಪುರ ಹಾರಿ ಬರಬೇಕು. ಈ ಬಡವರ ಜಮೀನು ಹತ್ತಿರ ಬರಬೇಕಾದರೆ ಅದು ಅಲ್ಲದೇ ಅವರಿಗೆ ಬೇರೆ ಲ್ಯಾಂಡ್ ಕೊಟ್ಟಿದ್ದಾರೆ. ಮೂಲತಃ ಈ ರೈತರ ಜಮಿನನ್ನು ಅಕ್ವೈರ್ ಮಾಡಿಕೊಂಡು ವಸತಿಗೆ ಕೊಡುವುದು ಇದೆಯಲ್ಲ ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಎಷ್ಟು ಆರ್ಗನೈಜೇಷನ್ಸ್‌ಗೆ ನಾವು ಕೊಟ್ಟಿದ್ದೇವೆ ಎಷ್ಟು ಜನ ಲಾಭಕ್ಕೆ ಮಾರಿಕೊಂಡಿದ್ದಾರೆ ರೈತರ ಸಮಾಧಿ ಮೇಲೆ ಸೌಧ ಕಟ್ಟುವುದು ಆಗಬಾರದು. ಅದು ಆಗತಕ್ಕದ್ದು ಅಲ್ಲ. ತಾವು ಏರ್ ಪೋರ್ಟ್‌ಗೆ ಲ್ಯಾಂಡ್ ಅಕ್ವೈರ್ ಮಾಡುವುದಕ್ಕೆ ನಾನು ಸುಪ್ರೀಂ ಕೋರ್ಟ್‌ಗೆ ಹಾಕಿದ್ದೇನೆ ಅದು ಡಬ್ಬಲ್ ಬೆಂಚ್‌ಗೆ ಹೋಯಿತು. ಸಿಂಗಲ್ ಬೆಂಚ್ ಆಯಿತು ಡಬ್ಬಲ್ ಬೆಂಚ್‌ಗೆ ಅಪೀಲು ಹಾಕಿದೆ ಅದು ಹೋಯಿತು. ಈಗ ಸುಪ್ರೀಂ ಕೋರ್ಟ್‌ಗೆ ಹಾಕಿದ್ದೇವೆ. ರೈತರ ಪರ ನಾವು ನಿಲ್ಲಬೇಕಾಗುತ್ತದೆ. ಈ ಕಾರಣದಿಂದ ಈ 35 ಜನಕ್ಕೆ ಏನು ಡಿ ನೋಟಿಫೈ ಮಾಡಿದ್ದಾರೆ ನಾನು ದಿನಾಂಕ 4-8-95 ರಂದು ಜಾಲಪ್ಪನವರಿಗೆ ಕಾಗದ ಬರೆದಿದ್ದ ಜಾಲಪ್ಪನವರು ಹೋಗಿ ಸ್ಥಳ ಮಹಜರ್ ಮಾಡಿ ಇದೆಲ್ಲಾ ಅವರಿಗೆ ಅನ್ಯಾಯ ಆಗಿದೆ ಎಂದು ತಿಳಿದುಕೊಂಡು, ಇವರೆಲ್ಲ ಬಡವರು ಇದ್ದಾರೆ ಎಂದು ತಿಳಿದುಕೊಂಡು ಅದನ್ನು ಡಿ ನೋಟಿಫೈ ಮಾಡಿದ್ದಾರೆ ಇದಕ್ಕೆ ನಾನು ಕ್ಲಾರಿಫೈ ಮಾಡಿದೆ ಅಷ್ಟೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತಿದ್ದೇನೆ. 6. ವಿತ್ತೀಯ ಕಾರ್ಯಕಲಾಪಗಳು

1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗ್ರಾಮಾಂತರ ನೀರು ಸರಬರಾಜು ನೈರ್ಮಲೀಕರಣಗಳ ಬೇಡಿಕೆಗಳನ್ನು ವಿರೋಧಿಸಿ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಮಾನ್ಯ ಅಧ್ಯಕ್ಷರೇ, ನಮ್ಮ ದೇಶ, ನಮ್ಮ ರಾಜ್ಯ, ಗ್ರಾಮೀಣ ಪ್ರದೇಶಗಳಿಂದಲೇ ಹೆಚ್ಚಾಗಿ ಕೂಡಿಕೊಂಡಿರುವ ಪ್ರದೇಶ. ನಮ್ಮ ದೇಶದ ಒಟ್ಟು ಜನಸಂಖ್ಯೆಯು ಶೇಕಡ 70ರಷ್ಟು ಗ್ರಾಮಾಂತರ ಪ್ರದೇಶಗಳಿಂದಲೇ ಆವರಿಸಿಕೊಂಡಿದೆ. ಹೆಚ್ಚಾಗಿ ಗ್ರಾಮಾಂತರ

ಪ್ರದೇಶದ ಹಳ್ಳಿಗಳು ಈ ದೇಶದ ಆರ್ಥಿಕ ಮತ್ತು ಸಾಮಾಜಿಕ ವಿಚಾರದಲ್ಲಿ ಬೆನ್ನೆಲುಬು ಆಗಿರುವುದರಿಂದ ಅವರ ಅಭಿವೃದ್ಧಿ ಆದರೆ ಮಾತ್ರ ಈ ದೇಶ ಪೂರ್ಣ ಪ್ರಮಾಣದ ಅಭಿವೃದ್ಧಿ ಆಗಲಿಕ್ಕೆ ಸಾಧ್ಯ ನಮ್ಮ ದೇಶದಲ್ಲಿ ಸುಮಾರು ಐದೂವರೆ ಲಕ್ಷಕ್ಕಿಂತಲೂ ಹೆಚ್ಚು ಹಳ್ಳಿಗಳು ಇವೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 30 ಸಾವಿರಕ್ಕೂ ಹೆಚ್ಚು ಹಳ್ಳಿಗಳು ಇವೆ.ಹಳ್ಳಿಗಳ ಅಭಿವೃದ್ಧಿಯನ್ನು ಮಾಡಲು ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಆಗಿದ್ದರೆ ಖಂಡಿತವಾಗಿ ಈ ರಾಜ್ಯ ಮುಂದೆ ಹೋಗಲಿಕ್ಕೆ ಸಾಧ್ಯ ಮತ್ತು ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೊಂಡು ಜನರನ್ನು ಬಡತನದ ರೇಖೆಗಿಂತ ಹೆಚ್ಚು ಎತ್ತರಕ್ಕೆ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯತೆ ಇರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ತೀರಾ ಹಿಂದುಳಿದ ಪ್ರದೇಶಗಳ ಹಳ್ಳಿಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ತೊಡಗಿಸುವಲ್ಲಿ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಎಲ್ಲಾ ಗ್ರಾಮಗಳ ಜನರಿಗೆ ಅನ್ನ, ಬಟ್ಟೆ, ವಸತಿ, ಔಷಧಿ, ಕುಡಿಯುವ ನೀರು, ಕೈಗೆ ಕೆಲಸ, ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ದೃಷ್ಟಿಯಲ್ಲಿ ಸರ್ಕಾರ ಬಹಳಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ಇದಕ್ಕೆ ಬೇಕಾದಂತಹ ಅನುದಾನಗಳನ್ನು ವ್ಯವಸ್ಥಿತ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲಿಲ್ಲ ಎಂದು ನಾನು ಬಹಳ ಖೇದದಿಂದ ಹೇಳುತ್ತಿದ್ದೇನೆ. ಈ ವರ್ಷದಲ್ಲಿ ಗ್ರಾಮಾಂತರ ಅಭಿವೃದ್ಧಿಗೋಸ್ಕರ ಕೇವಲ 720ಕೋಟಿ ರೂಪಾಯಿಗಳನ್ನು ಮಾತ್ರ ನಿಗದಿಪಡಿಸಿರುವುದರಿಂದ ಎಲ್ಲಾ ಸಮಸ್ಯೆಗಳನ್ನು ಇಷ್ಟೊಂದು ಬಂಡವಾಳದಲ್ಲಿ ಜನರ ಅಭಿವೃದ್ಧಿಯನ್ನು ಯಾವ ದೃಷ್ಟಿಯಲ್ಲಿ ಸಾಧಿಸುತ್ತಾರೆ ಎನ್ನುವ ಬಗ್ಗೆ ನಮಗೆ ಅಂಕಿಅಂಶಗಳನ್ನು ಸರ್ಕಾರ ಕೊಡಲಿಲ್ಲ. ನಮ್ಮ ಗ್ರಾಮೀಣ ಅಭಿವೃದ್ಧಿ ಬಗ್ಗೆ ಸರ್ಕಾರ ಬಹಳ ವರ್ಷಗಳಿಂದ ಕೆಲಸ ಮಾಡುತ್ತಾ ಹಣ ಖರ್ಚು ಮಾಡುತ್ತಾ ಉಂಟು. ಆದರೆ ಇದು ಏನಾಗಿದೆ ಎಂದರೆ ತೆನಾಲಿ ರಾಮಕೃಷ್ಣ ಬೆಕ್ಕನ್ನು ಸಾಕಿದ ಹಾಗೆ ಆಗಿದೆ. ಆ ಜನರ ಕೈಗೆ ಯಾವ ಸಂಪನ್ಮೂಲ ಮುಟ್ಟಬೇಕಾಗಿತ್ತು. ಅದು ಅವರಿಗೆ ಸಿಗುತ್ತಿಲ್ಲ. ಇವತ್ತು ಜಿಲ್ಲಾ ಪರಿಷತ್ತು ಆಗಲಿ ಗ್ರಾಮ ಪಂಚಾಯತಿ ಆಗಲಿ ಸರ್ಕಾರದ ಯಾವುದೇ ಕಛೇರಿಗಳಿಗೆ ಆಗಲಿ ಗ್ರಾಮಾಂತರ ಪ್ರದೇಶದ ಜನ ನೇರವಾಗಿ ಬಂದು ತನ್ನ ಕೆಲಸಕಾರ್ಯಗಳನ್ನು ಮಾಡಿಸಿಕೊಂಡು ಹೋಗುವಂತಹ ವಿಚಾರದಲ್ಲಿ ಅವನ ಮನ ಮುಟ್ಟಲಿಲ್ಲ. ಅವನು ಹೆದಲಿಕೆಯಿಂದ ಹಿಂದೆ ಹೋಗುತ್ತಿದ್ದಾನೆ. ಮಧ್ಯವರ್ತಿಗಳು ಅಥವಾ ರಾಜಕಾರಣಿಗಳು ಬೇರೆ ಬೇರೆ ಜನರ ಮುಖಾಂತರ ತನ್ನ ಕೆಲಸಕಾರ್ಯಗಳನ್ನು ಸಾಧಿಸುತ್ತಿದ್ದಾರೆ.

ಸರ್ಕಾರಿ ಇಲಾಖೆಗಳ ಮತ್ತು ಜನರ ನಡುವೆ ಬಹಳಷ್ಟು ಕಂದಕಗಳು ಇರುವುದರಿಂದ ಈ ಒಂದು ವ್ಯವಸ್ಥೆ ನಿರ್ಮೂಲನ ಆಗಬೇಕು. ಒಬ್ಬ ಸಂಸಾರಸ್ಥ ತಾನು ತನ್ನ ಮಗನನ್ನು ಶಾಲೆಗೆ ಕಳುಹಿಸಿ ಅವನಿಗೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡು ಪಠ್ಯಪುಸ್ತಕಗಳು ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡು ಮಗ ಶಾಲೆಗೆ ಹೋಗುತ್ತಾನೆಯೇ ಅವನು ಅಲ್ಲಿ ಕಲಿಯುತ್ತಾನೆಯೇ ಅವನ ವ್ಯವಸ್ಥೆ ಹೇಗೆ ಅವನಿಗೆ ಬೇಕಾದಂತಹ ಹಾಜರಾತಿ ಇದೆಯೇ ಇಲ್ಲವೇ ಎನ್ನುವಂತಹ ವಿಚಾರವನ್ನು ಕೇಳಲಿಕ್ಕೆ ತಂದೆತಾಯಿಗಳು ಹೋಗದೇ ಇದ್ದರೆ ಫಲಿತಾಂಶ ಶೂನ್ಯವಾಗುತ್ತದೆ. ಈಗ ನಮ್ಮ ಗ್ರಾಮೀಣ ಅಭಿವೃದ್ಧಿ ವ್ಯವಸ್ಥೆಗಳು ಕೂಡ ಹಾಗೆಯೇ ಆಗಿದೆ. ಸರ್ಕಾರದವರು ಬೇಕಾದಷ್ಟು ಯೋಜನೆಗಳನ್ನು ರೂಪಿಸಿಕೊಂಡಿದ್ದೀರಿ. ಆದರೆ ಆ ಗ್ರಾಮದ ಬಡವರ್ಗದ ಜನರಿಗೆ ಕಾರ್ಯಕ್ರಮ ಮುಟ್ಟಿದೆಯೇ? ಅವನಿಗೆ ಆ ವ್ಯವಸ್ಥೆ ಮುಟ್ಟಿದೆಯೇ ಅವನಿಗೆ

ಅದರ ಫಲ ಸಿಕ್ಕಿದೆಯೇ ಎನ್ನುರ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡುತ್ತಿಲ್ಲ. ಆದ್ದರಿಂದ ಈ ಎಲ್ಲಾ ಭಾವನೆಗಳು ಶೂನ್ಯ ಫಲಿತಾಂಶವನ್ನು ಕೊಟ್ಟಿದೆ ಎನ್ನುವ ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ನಮ್ಮದು ಕೃಷಿ ಪ್ರದೇಶ.

ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಕೃಷಿ ಉತ್ಪಾದನೆ ಬಗ್ಗೆ ಕೃಷಿಯಲ್ಲಿ ಹೆಚ್ಚು ಉದ್ಯೋಗವನ್ನು ತೆಗೆದುಕೊಳ್ಳುವ ಬಗ್ಗೆ ಏನೇನು ಕಾರ್ಯಕ್ರಮ ತಮ್ಮ ಸರ್ಕಾರ ತೆಗೆದುಕೊಂಡಿದೆ. ಕೃಷಿಯಲ್ಲಿ ಹೆಚ್ಚು ಬೆಳೆಗಳನ್ನು ತೆಗೆದುಕೊಳ್ಳುವ ಬಗ್ಗೆ ಅಧಿಕ ಇಳುವರಿಯನ್ನು ತೆಗೆದುಕೊಳ್ಳುವ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದೀರಿ. ಸಾಮಾನ್ಯ ರೈತರ ಬಗ್ಗೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಅದರ ಬಗ್ಗೆ ತಾವು ಎಷ್ಟು ಅನುದಾನಗಳನ್ನು ಬಿಡುಗಡೆ ಮಾಡಿದ್ದೀರಿ. ತಾವು ಕೇವಲ ಒಂದು ಗ್ರಾಮ ಸಭೆ ಮಾಡುವ ಪ್ರಶ್ನೆ ಇಲ್ಲ.

ವ್ಯವಸಾಯಗಾರರಿಗೆ ಬರೀ ಪರಿಕರಗಳನ್ನು ಕೊಟ್ಟರೆ ಆಗುವುದಿಲ್ಲ. ವೈಜ್ಞಾನಿಕವಾಗಿ ಬೆಳೆ ತೆಗೆಯುವ ಬಗ್ಗೆ ಮತ್ತು ತೆಗದ ಬೆಳೆಗೆ ಯೋಗ್ಯ ಬೆಲೆ ಸಿಗುವ ಹಾಗೆ ಸರ್ಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? ರೈತರು ಬೆಳೆದ ಬೆಳೆಗೆ ಪ್ರೋತ್ಸಾಹ ಬೆಲೆಯನ್ನು ಸರ್ಕಾರ ಕೊಟ್ಟಿದ್ದೆಯೇ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷ ಪೂರ್ತಿ ಬೆಳೆ ತೆಗೆಯತಕ್ಕಂಥ ರೀತಿಯಲ್ಲಿ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ? ಪಂಜಾಬ್ ರಾಜ್ಯದಲ್ಲಿ ಒಂದು ಇಂಚೂ ಜಾಗವನ್ನು ವೇಸ್ಟ್ ಮಾಡದೆ ಎಲ್ಲಾ ಜಾಗದಲ್ಲಿ ಗೋಧಿಯನ್ನು ಬೆಳೆದು ಇಡೀ ದೇಶಕ್ಕೆ ಸರಬರಾಜು ಮಾಡಲಾಗುತ್ತಿದೆಯೆಂದು ಅಲ್ಲಿನ ಜನ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಆಹಾರ ಉತ್ಪಾದನೆ ವಿಷಯದಲ್ಲಿ ಇನ್ನೂ ಸ್ವಾವಲಂಬನೆಯನ್ನು ಸಾಧಿಸಿಲ್ಲ. ಉಳುವವನಿಗೆ ಭೂಮಿ ಎನ್ನುವ ಕಾನೂನನ್ನು ಮಾಡಿದ್ದರೂ ಸಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡ 25 ರಷ್ಟು ಭೂಮಿಯನ್ನು ಕೃಷಿಗೆ ಉಪಯೋಗ ಮಾಡಿಕೊಳ್ಳದೆ ಜಮೀನು ಪಾಳು ಬಿದ್ದಿದೆ. ಅದೂ ಅಲ್ಲದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ನೀರಾವರಿ ರಹಿತವಾಗಿದೆ. ಸರಿಯಾಗಿ ಮಳೆ ಬಂದಾಗ ಮಾತ್ರ ಗದ್ದೆಗಳಲ್ಲಿ ಭತ್ತದ ಎರಡು ಬೆಳೆಗಳನ್ನು ತೆಗೆಯಬಹುದು. ನೈರುತ್ಯ ಮಾರುತಗಳು ಏರುಪೇರಾದಾಗ ಒಂದನೇ ಬೆಳೆಯೂ ಇಲ್ಲ, ಎರಡನೇ ಬೆಳೆಯೂ ಇಲ್ಲ. ಅದಕ್ಕಾಗಿ, ದಕ್ಷಿಣ ಕನ್ನಡ ಜಿಲ್ಲೆಯ ರೈತಾಪಿ ಜನಗಳಿಗೆ ಏನು ವ್ಯವಸ್ಥೆ ಮಾಡಲಾಗಿದೆ.

ಬೇರೆ ಜಿಲ್ಲೆಗಳಲ್ಲಿ ನೀರಾವರಿ ವ್ಯವಸ್ಥೆ ಮಾಡುವುದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿರುವ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯ ಅಭಿವೃದ್ಧಿಗಾಗಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆಂದು ಮಾನ್ಯ ಮಂತ್ರಿಯವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲದ ಸಮಯದಲ್ಲಿ ಏನಾದರೂ ನೆರೆ ಬಂದರೆ ರೈತರು ಗದ್ದೆಗಳಲ್ಲಿ ಮಾಡಿರುವ ಫಸಲಿನಲ್ಲಿ 80 ಪರ್‌ಸೆಂಟ್ ನಾಶವಾಗಿ ಹೋಗುತ್ತದೆ. ಈ ರೀತಿ ಬೆಳೆ ಕಳೆದುಕೊಂಡ ರೈತರುಗಳಿಗೆ ವಿಮಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ? ಇಂಥಾ ಅನಾಹುತಗಳಿಂದ ಫಸಲನ್ನು ಕಳೆದುಕೊಂಡಂಥ ರೈತರುಗಳಿಗೆ ಇದುವರೆಗೆ ಏನಾದರೂ ಪರಿಹಾರವನ್ನು ಕೊಡಲಾಗಿದೆಯೇ? 1994-95ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದಂಥ ಅತಿವೃಷ್ಟಿಯಲ್ಲಿ ರೈತರುಗಳಿಗೆ ಬಹಳಷ್ಟು ತೊಂದರೆಯಾಯಿತು. ಇದರ ಬಗ್ಗೆ ರೆವಿನ್ಯೂ ಅಧಿಕಾರಿಗಳು ಬಂದು ಎಲ್ಲಾ ಮಾಹಿತಿಗಳನ್ನು ಸಂಗ್ರಹ

ಮಾಡಿ ಪ್ರತಿ ಎಕರೆ ಜಮಿನಿಗೆ 200 ರೂಪಾಯಿಗಳಂತೆ ಪರಿಹಾರ ಧನ ಕೊಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ ಮಾಡಿದರು.

ಒಂದು ಎಕರೆಯಲ್ಲಿ ಬೆಳೆ ಮಾಡಲು ರೈತರುಗಳು ಐದಾರು ಸಾವಿರ ರೂಪಾಯಿ ಖರ್ಚು ಮಾಡಿ ಅತಿವೃಷ್ಟಿಯಿಂದ ನಷ್ಟವಾಗಿರುವುದಕ್ಕೆ ಜುಜುಬಿ 200 ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡುತ್ತೇವೆಂದು ಹೇಳಿದ್ದರೂ ದುರದೃಷ್ಟವಶಾತ್ ಇಲ್ಲಿಯವರೆಗೆ ಹಣವನ್ನು ಬಿಡುಗಡೆ ಮಾಡಲಿಲ್ಲ. ನೈಸರ್ಗಿಕ ವಿಕೋಪಗಳಿಂದ ರೈತರುಗಳು ತಮ್ಮ ಜೀವಮಾನವಿಡೀ ತೊಂದರೆಗೆ ಒಳಗಾಗುತ್ತಿದ್ದಾರೆ. ಈ ರೀತಿ ನಿರಂತರವಾಗಿ ತೊಂದರೆಗೆ ಒಳಗಾಗುವ ರೈತನ ಅನುಕೂಲಕ್ಕಾಗಿ ಸರ್ಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? ಇನ್ನು ಗ್ರಾಮೀಣ ಪ್ರದೇಶದಲ್ಲಿ ಕಾರ್ಯಕ್ರಮಗಳು ಫಲಪ್ರದವಾಗಬೇಕಾದರೆ ಅಭಿವೃದ್ಧಿ ಕೆಲಸಗಳನ್ನು ಗ್ರಾಮ ಮಟ್ಟದಿಂದ ಮಾಡಿಕೊಂಡು ಮೇಲೆ ಬರಬೇಕು. ಈ ರೀತಿ ಫಲಪ್ರದವಾದ ಕೆಲಸಗಳನ್ನು ಮಾಡಬೇಕಾದರೆ ಯೋಗ್ಯವಾದ ಚಿಂತನೆಗಳು ಮತ್ತು ಯೋಜನೆಗಳು ಬೇಕು ಹಾಗೂ ಅವುಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಬೇಕು. ಈ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡಬೇಕಾದರೆ ಮೊದಲು ಗ್ರಾಮ ಪಂಚಾಯಿತಿಗಳು ಗಮನವನ್ನು ಹರಿಸಬೇಕಾಗುತ್ತದೆ. ಅದಕ್ಕಾಗಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಗ್ರಾಮ ಮಟ್ಟದಲ್ಲಿ ಆಗಬೇಕಾದ ಕೆಲಸಗಳನ್ನು ಸಮೀಕ್ಷೆ ಮಾಡಿ ಯೋಜನೆಗಳನ್ನು ಹಾಕಿಕೊಂಡು ಆ ಕೆಲಸಗಳನ್ನು ಅನುಷ್ಠಾನಗೊಳಿಸಬೇಕು. ಗ್ರಾಮ ಮಟ್ಟದಲ್ಲಿ ಯಾರಾದರೂ ಸರ್ಕಾರದ ಜಮೀನುಗಳನ್ನು ಒತ್ತುವರಿ ಮಾಡಿದ್ದರೆ ಅಂಥವರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳುವಂಥ ಹಕ್ಕನ್ನು ಗ್ರಾಮ ಪಂಚಾಯತಿಗಳಿಗೆ ಕೊಡಬೇಕು. ಆದರೆ, ಇವತ್ತಿನ ದಿವಸಗಳಲ್ಲಿ ಗ್ರಾಮ ಮಟ್ಟದಲ್ಲಿರುವ ಸರ್ಕಾರಿ ಜಮೀನುಗಳಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಮತ್ತು ಇತರೆ ಕೆಲಸಗಳಿಗೆ ಉಪಯೋಗ ಮಾಡಿ ಕೊಂಡಿರುತ್ತಾರೆ. ಇಂಥಾ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಅತಿಕ್ರಮಣಕಾರರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಇವತ್ತಿನ ಅಧಿಕಾರಿ ವ್ಯಾಪ್ತಿಯಲ್ಲಿ ಆಗುವುದಿಲ್ಲ. ಅವರು ಹೆಚ್ಚೆಂದರೆ, ಅಸಿಸ್ಟೆಂಟ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್‌ರವರಿಗೆ ಅರ್ಜಿಯನ್ನು ಕೊಡಬಹುದಷ್ಟೇ.

ಇದರಿಂದಾಗಿ ಸರ್ಕಾರದ ಜಮೀನಿನಲ್ಲಿ ಅತಿಕ್ರಮಣ ಮಾಡಿರುವವರನ್ನು ಖಾಲಿ ಮಾಡಿಸುವಲ್ಲಿ ವಿಫಲರಾಗಿರುತ್ತಾರೆ. ಅದಕ್ಕಾಗಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಅಥವಾ ಚುನಾಯಿತ ಮಂಡಳಿಗೆ ಅತಿಕ್ರಮಣ ಮಾಡುವವರನ್ನು ತಡೆಯುವಂಥ ಅಧಿಕಾರವನ್ನು ಕೊಡಬೇಕೆಂದು ನಾನು ಈ ಮೂಲಕ ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ ಗ್ರಾಮೀಣ ಮಟ್ಟದಲ್ಲಿ ಅಗ್ನಿ ದುರಂತಗಳಿಂದ ಹಾಗೂ ಮತ್ತೀತರ ದುರಂತಗಳಿಂದ ಯಾರಿಗಾದರೂ ಹಾನಿಯಾದರೆ ಅಂಥವರು ಅರ್ಜಿಗಳನ್ನು ಡೆಪ್ಯುಟಿ ಕಮಿಷನರ್‌ರವರಿಗೆ ಸಲ್ಲಿಸಿ ಪರಿಹಾರವನ್ನು ಪಡೆಯಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಯಾರಿಗೆ ಪರಿಹಾರ ಸಿಗಬೇಕೋ ಅವರಿಗೆ ಸಿಗುವುದಿಲ್ಲ. ಆದುದರಿಂದ ಇಂಥಾ ದುರಂತಗಳಲ್ಲಿ ತೊಂದರೆಗೆ ಈಡಾದವರನ್ನು ಗುರುತಿಸಿ ಪರಿಹಾರ ಕೊಡುವ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗುತ್ತದೆಯೇ ಎಂದು ಮಾನ್ಯ ಮಂತ್ರಿಯವರನ್ನು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಒಂದು ಗ್ರಾಮದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಆ ಗ್ರಾಮಕ್ಕೆ ಸಂಬಂಧಪಟ್ಟಂಥ ಎಲ್ಲಾ ಅಂಕಿ ಅಂಶಗಳು ಬೇಕಾಗುತ್ತವೆ. ಅಭಿವೃದ್ಧಿ ವಿಚಾರಗಳ ಬಗ್ಗೆ ಮಾಹಿತಿ ಬೇಕಾಗುತ್ತದೆ. ಕಾಮಗಾರಿ ವಿಚಾರಗಳಲ್ಲಿಯೂ ಮಾಹಿತಿ ಇರಬೇಕಾಗುತ್ತಿದೆ.

ಸಾರ್ವಜನಿಕ ಸಮಸ್ಯೆಗಳ ಬಗ್ಗೆಯೂ ಅವರಿಗ ತಿಳಿದಿರಬೇಕಾಗುತ್ತದೆ. ಈ ಎಲ್ಲಾ ರೀತಿಯ ಮಾಹಿತಿಗಳನ್ನು ಗ್ರಾಮ ಪಂಚಾಯಿತಿಯಲ್ಲಿ ಇಟ್ಟುಕೊಂಡು ಅವುಗಳಿಗೆ ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ರೂಪಿಸುವುದಕ್ಕೆ ಅನುಕೂಲವಾಗುವಂತೆ ಗ್ರಾಮ ಪಂಚಾಯಿತಿಗಳಲ್ಲಿ ವ್ಯವಸ್ಥೆ ಮಾಡಬೇಕು. ಈಗ ಪಂಚಾಯತ್ ವ್ಯವಸ್ಥೆಯಲ್ಲಿ ಮೂರು ಹಂತದ ಆಡಳಿತ ವ್ಯವಸ್ಥೆಯನ್ನು ಮಾಡಲಾಗಿದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯಿತಿ. ಒಂದು ಜಿಲ್ಲೆಯಲ್ಲಿ ಸರ್ವತೋಮುಖ ಅಭಿವೃದ್ಧಿ ಮಾಡುವ ಸಲುವಾಗಿ ಜವಾಬ್ದಾರಿಯುತ ಜನ ಪ್ರತಿನಿಧಿಗಳ ಮತ್ತು ಅಧಿಕಾರಿಗಳನ್ನು ಒಳಗೊಂಡಂತೆ ಒಂದು ಜಿಲ್ಲಾ ಯೋಜನಾ ಆಯೋಗವನ್ನು ರಚನೆ ಮಾಡಲಾಗುತ್ತದೆಂದು ಸರ್ಕಾರ ಭರವಸೆ ಕೊಟ್ಟಿತು.

ಈ ರೀತಿ ಜಿಲ್ಲಾ ಯೋಜನಾ ಆಯೋಗವನ್ನು ರಚನೆ ಮಾಡುವುದರಿಂದ ಇಡೀ ಜಿಲ್ಲೆಯಲ್ಲಿ ಯಾವ ಯಾವ ಸಮಸ್ಯೆಗಳಿವೆ ಎಂಬ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡಿಸುವುದಕ್ಕೆ ತಕ್ಕಂತೆ ಅನುದಾನವನ್ನು ಒದಗಿಸಿಕೊಂಡು ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಕೂಡಲೇ, ಈ ಜಿಲ್ಲಾ ಆಯೋಗವನ್ನು ರಚನೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಈ ರೀತಿ ಜಿಲ್ಲಾ ಆಯೋಗವನ್ನು ರಚನೆ ಮಾಡುವುದರ ಮೂಲಕ ವ್ಯವಸ್ಥಿತವಾದಂಥ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ತೆಗೆದುಕೊಂಡರೆ ಸಂಬಂಧಪಟ್ಟ ಜಿಲ್ಲೆಯು ಪ್ರಗತಿಪರವಾಗಿ ಮುಂದಕ್ಕೆ ಹೋಗುತ್ತದೆ. ಆದುದರಿಂದ, ಈ ಬಗ್ಗೆ ರಾಜ್ಯ ಸರ್ಕಾರ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯ ಮತ್ತು ದೇಶದಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರತಕ್ಕ ಜನರು ಬಹಳ ದೊಡ್ಡ ಪ್ರಮಾಣದಲ್ಲಿದ್ದಾರೆ. ತಿಂಗಳಿಗೆ ಒಂದು ಸಾವಿರ ರೂಪಾಯಿಗಿಂತ ಕಡಿಮೆ ಅಂದರೆ ವಾರ್ಷಿಕ 11 ಸಾವಿರ ರೂಪಾಯಿಗಿಂತ ಕಡಿಮೆ ಆದಾಯ ಇರುವವರನ್ನು ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವವರೆಂದು ಗುರುತಿಸಲಾಗಿದೆ. ನಮ್ಮ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳ ಮಟ್ಟದಲ್ಲಿರುವವರ ವ್ಯವಸ್ಥೆ ಹೇಗಿದೆ ಎಂದು ನೋಡಿದರೆ, ನಿರ್ಗತಿಕರಾಗಿರುವವರ ಒಂದು ಗುಂಪು ಇದೆ, ವಾರ್ಷಿಕ 4 ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುವಂಥ ಕುಟುಂಬಗಳ ಸಂಖ್ಯೆ 18 ಲಕ್ಷ 30, 457.

12.00 ನೂನ್

ಬಡತನ ರೇಖೆಗಿಂತ ಕಡಿಮೆ ಇರುವವರಲ್ಲಿ 50 ಪರ್ಸೆಂಟ್‌ನಷ್ಟು ಜನರು ಅವರೇ ಇದ್ದಾರೆ. ಅನಂತರ ಅತೀ ಕಡುಬಡವರು, ಅಂದರೆ 4 ಸಾವಿರದಿಂದ 6 ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರುವವರು, 8ಲಕ್ಷದ 3 ಸಾವಿರದ 764 ಕುಟುಂಬಗಳು ಇವೆ. ಒಟ್ಟು ಶೇಕಡ 24ರಷ್ಟು ಈ ವರ್ಗದ ಜನರಿದ್ದಾರೆ. ಅನಂತರ ಅತೀ ಬಡವರು ಅಂದರೆ ವಾರ್ಷಿಕ ಆದಾಯ 6ಸಾವಿರಗಳಿಂದ 8 ಸಾವಿರ ರೂಪಾಯಿಗಳವರೆಗೆ ಇರುವವರು 4 ಲಕ್ಷ 37 ಸಾವಿರ 790 ಕುಟುಂಬಗಳು ಇವೆ. ಇವರು ಶೇಕಡಾ 13 ರಷ್ಟಿದ್ದಾರೆ. ಅನಂತರ ಬಡವರು, 8500 ರೂಪಾಯಿಗಳಿಂದ 11 ಸಾವಿರ ರೂಪಾಯಿವರೆಗೆ ವಾರ್ಷಿಕ ಆದಾಯವಿರುವವರು, 2 ಲಕ್ಷ 35 ಸಾವಿರ 716 ಕುಟುಂಬಗಳು ಇವೆ. ಅಂದರೆ ಶೇಕಡಾ 7ರಷ್ಟಿದ್ದಾರೆ. ಒಟ್ಟು ಬಡತನರೇಖೆಗಿಂತ ಕಡಿಮೆ ಇರುವ ಒಟ್ಟು ಕುಟುಂಬಗಳು ನಮ್ಮ ರಾಜ್ಯದಲ್ಲಿ 33 ಲಕ್ಷ, 7 ಸಾವಿರದ 706 . ಒಂದು ಅಂದಾಜು ಅಂಕಿಅಂಶಗಳ ಪ್ರಕಾರ ಒಂದು ಕುಟುಂಬದಲ್ಲಿ 6ಜನ ಸದಸ್ಯರು ಎಂದು ಲೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ 2 ಕೋಟಿ ಜನರು ಬಡತನ ರೇಖೆಗಿಂತ ಕೆಳಗೆ

ಇರುವವರಿದ್ದಾರೆ. ನಮ್ಮ ರಾಜ್ಯದ ಜನಸಂಖ್ಯೆ ನಾಲ್ಕು ಕೋಟಿ ಎಂದಿದ್ದರೆ 2 ಕೋಟಿ ಜನರು ಬಡತನ ರೇಖೆಗಿಂತ ಕಡಿಮೆ ಇರುವವರು. ಇಂಥವರ ಬಗ್ಗೆ ಸರಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ? ಸರಕಾರ ಗ್ರಾಮೀಣಾಭಿವೃದ್ಧಿಯಲ್ಲಿ 720 ಕೋಟಿ ರೂಪಾಯಿಗಳನ್ನು ಇಟ್ಟು, ಇಡೀ ರೀತಿಯಲ್ಲಿ ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹಲವಾರು ಕೋಟಿ ರೂಪಾಯಿಗಳ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೆ ಈ ನಿರ್ಗತಿಕ ಜನರ ಬಗ್ಗೆ, ಕಡುಬಡವರ ಬಗ್ಗೆ ಬಡತನ ರೇಖೆಗಿಂತ ಹೆಚ್ಚು ಕಡಿಮೆ ಇರುವವರ ಬಗ್ಗೆ ನಿಮ್ಮಲ್ಲಿ ಯಾವುದೇ ಕಾರ್ಯಕ್ರಮಗಳು ಕಾಣುವುದಿಲ್ಲ. ಎಲ್ಲಾ ಜಿಲ್ಲಾಪರಿಷತ್‌ಗಳ ಮೂಲಕ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಈ ನಿರ್ಗತಿಕ ಜನರ ಬಗ್ಗೆ ಯಾವ ಕಾರ್ಯಕ್ರಮಗಳೂ ಇಲ್ಲ, ಅಂಥ ಯಾವ ಒಂದು ಅಂಕಿಅಂಶಗಳೂ ತಮ್ಮಲ್ಲಿಲ್ಲ. ದೇಶದಲ್ಲಿ ಶ್ರೀಮಂತರು, ಅತ್ಯಂತ ಶ್ರೀಮಂತರು, ಮಧ್ಯಮವರ್ಗದವರು,

ಕೆಳಮಧ್ಯಮವರ್ಗದವರು, ಮುಂತಾಗಿ ಇದ್ದಾರೆ. ಬಹುಶಃ ಅತ್ಯಂತ ಶ್ರೀಮಂತವರ್ಗದವರು ಶೇಕಡಾ 5ರಷ್ಟು ಕೂಡ ಇರಲಾರರು. ದುರಾದೃಷ್ಟವಶಾತ್ ಇವೊತ್ತು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಅಭಿವೃದ್ಧಿಯ ದೃಷ್ಟಿಯಲ್ಲಿ ಈ ರಾಜ್ಯದಲ್ಲಿರುವ 5 ಪರ್‌ಸೆಂಟ್‌ನಷ್ಟು ಇರುವ ಜನರೇ ಎಲ್ಲಾ ವ್ಯವಸ್ಥೆಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ನಮ್ಮ ಯೋಜನೆಗಳು ಸಫಲವಾಗಬೇಕಾಗಿದ್ದರೆ ಇವರ ಕೃಪಾಕಟಾಕ್ಷವೇ ಜಾಸ್ತಿಯಾದ ಬೇಕಾಗಬಹುದೋ ಏನೋ? ಆದರೆ ಬಡತನರೇಖೆಗಿಂತ ಕಡಿಮೆ ಇರುವಂಥವರ ಬಗ್ಗೆ ಸರಕಾರದವರು ಇನ್ನೂ ಕಾಳಜಿ ವಹಿಸಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಅವರಿಗೋಸ್ಕರ ನಿರ್ದಿಷ್ಟ ಪ್ರಮಾಣದಲ್ಲಿ ಯಾವುದೇ ಕಾರ್ಯಕ್ರಮವನ್ನೂ ಹಮ್ಮಿಕೊಂಡಿಲ್ಲ, ಅವರುಗಳನ್ನು ಮೇಲಕ್ಕೆ ಎತ್ತುವ ಕಾರ್ಯವನ್ನು ಮಾಡಿಲ್ಲ. ಈ ಮಾತುಗಳನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಆದುದರಿಂದ ದಯಮಾಡಿ ಅಂಥ ಬಡ ಜನರಿಗೆ ಅನುಕೂಲವಾಗುವ ಹಾಗೆ ನಿರ್ಧಿಷ್ಟವಾದ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಮಾಡುತ್ತೇನೆ. ಇಂಥ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಬಡಜನರ ಕಣ್ಣೀರನ್ನು ಒರೆಸುವ ಕೆಲಸವನ್ನು ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಸಮಯಾವಕಾಶದ ಕೊರತೆಯಿಂದ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡುವುದನ್ನು ಬಿಟ್ಟು ನಮ್ಮ ಜಿಲ್ಲೆಗೆ ಸೀಮಿತವಾಗಿರುವಂತೆ ವಿಶೇಷತಃ ಆಶ್ರಯ ಮತ್ತು ಡಾ: ಅಂಬೇಡ್ಕರ್ ಯೋಜನೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನನಗೆ ಗೊತ್ತಿರುವ ಹಾಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ಕುರಿತು ಆಡಿಟ್ ಆಕ್ಷೇಪಣೆಯನ್ನು ಮಾಡಿದ್ದಾರೆ. ಈ ರೀತಿಯಲ್ಲಿ ರಾಜ್ಯದಲ್ಲಿ 88 ಲಕ್ಷ ರೂಪಾಯಿಗಳ ಹಣವು ದುರುಪಯೋಗವಾಗಿದೆ. ಯಾವುದೇ ವ್ಯವಸ್ಥೆಗಳಾಗಿಲ್ಲ. ಜನರಿಗೆ ಇನ್ನೂ ಮನೆಗಳು ಸಿಕ್ಕಿಲ್ಲ. ಅರ್ಧಗೋಡೆ, ಪೂರ್ಣಗೋಡೆ ಮುಂತಾದ ವ್ಯವಸ್ಥೆಗಳಲ್ಲೇ ಇನ್ನೂ ಕೂಡ ಮುಂದುವರಿದಿದೆ. ಇದನ್ನು ಅವ್ಯವಸ್ಥೆಯಾಗಿ ಮುಂದುವರಿಸಿಕೊಂಡು ಹೋಗುತ್ತೀರೋ ಅಥವಾ ಏನಾದರೂ ಒಂದು ಕ್ರಮವನ್ನು ಜರುಗಿಸುತ್ತೀರೋ ಆದುದರಿಂದ ಪಿಎಸಿ ಯವರ ಆಕ್ಷೇಪಣೆಯ ಬಗ್ಗೆ ಸರಕಾರದ ಮುಂದಿರುವ ಕ್ರಮಗಳೇನು? ನಿಮ್ಮ ಇಲಾಖೆಯವರಿಗೆ ಇಂಥ ದುರುಪಯೋಗದ ವಿಚಾರ ಗಮನಕ್ಕೆ ಬಂದರೂ ಕೂಡ ಯಾವುದೇ ಕ್ರಮ ತೆಗೆದುಕೊಳ್ಳದೇ ಇರಲು ಕಾರಣಗಳೇನು? ನನ್ನ ಜಿಲ್ಲೆಯ ಕೆಲವು ಅಂಕಿಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1994-95ರಲ್ಲಿ ಭೌತಿಕ ಗುರಿಯು 5,938 ಆಗಿದ್ದರೆ ಒಟ್ಟು

ಕೆಲಸವಾದ ಮನೆಗಳು 4,203 ಮಾತ್ರ. 1,732 ಮನೆಗಳು ಇನ್ನೂ ಆಗಲಿಲ್ಲ. 1995-96ರಲ್ಲಿ 2,800 ಭೌತಿಕ ಗುರಿ ಇದ್ದರೆ 740 ಮನೆಗಳು ಮಾತ್ರ ಪೂರ್ಣಗೊಂಡಿವೆ. 2,060 ಮನೆಗಳು ಇನ್ನೂ ಕೂಡ ಆಗಬೇಕಾಗಿದೆ.

ಅಂಬೇಡ್ಕರ್ ಯೋಜನೆಯಲ್ಲಿ 1993-94ರಲ್ಲಿ 1,525ಮನೆಗಳು ಗುರಿ ಇದ್ದರೂ ಕೂಡ 1,427 ಮನೆಗಳು ಪೂರ್ಣವಾಗಿವೆ. 98 ಮನೆಗಳು ಇನ್ನೂ ಆಗಬೇಕಾಗಿದೆ. 1994-95ರಲ್ಲಿ 3,430ಮನೆಗಳನ್ನು ಗುರಿ ಇಟ್ಟುಕೊಂಡು, 1,775 ಮನೆಗಳನ್ನು ಮಾತ್ರ ಮಾಡಿದ್ದಾರೆ. ಇದನ್ನು ನೋಡಿದರೆ ತಮಗೆ ಬಡವರ ಬಗ್ಗೆ, ಗ್ರಾಮೀಣಾಭಿವೃದ್ಧಿಯ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವುದನ್ನು ತೋರಿಸುತ್ತದೆ. 1993-94, 1994-95ರಲ್ಲಿಯೂ ಮನೆಗಳು ಪೂರ್ಣ ಪ್ರಮಾಣದಲ್ಲಿ ಗುರಿ ಸಾಧನೆಯಾಗಲಿಲ್ಲ. ಅದಕ್ಕೆ ಬೇಕಾಗುವಂಥ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡದಿದ್ದರೆ ಏನೂ ಪ್ರಯೋಜನವಾದಂತಾಗುವುದಿಲ್ಲ. ತಾವು ಒಂದು ಹಂತದಲ್ಲಿ ಹಣವನ್ನು ಬಿಡುಗಡೆ ಮಾಡಿದರೆ ಮತ್ತೊಂದು ಹಂತದಲ್ಲಿ ಹಣವನ್ನು ಬಿಡುಗಡೆ ಮಾಡದೇ ಇರುವುದರಿಂದ ಮನೆಗಳ ಕೆಲಸವು ಪೂರ್ಣಗೊಳ್ಳುವುದಿಲ್ಲ. ಆದುದರಿಂದ ಅವುಗಳಿಗೆ ಬೇಕಾಗುವ ಸಂಪನ್ಮೂಲಗಳನ್ನು ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಬೇಕು. ಎಷ್ಟು ಮನೆಗಳನ್ನು ಕಟ್ಟಲು ಸಾಧ್ಯವೋ ಅಷ್ಟು ಮನೆಗಳನ್ನು ಮಾತ್ರ ತೆಗೆದುಕೊಳ್ಳಿ. ಲೆಕ್ಕಾಚಾರಕ್ಕಾಗಿ ಸಾವಿರಗಟ್ಟಲೆ ಮನೆಗಳನ್ನು ತೆಗೆದುಕೊಂಡು ಬಹಳಷ್ಟು ಜನರ ಮನೆಗಳನ್ನು ಅರ್ಧಂಬರ್ಧ ಮಾಡಿಕೊಟ್ಟು ಅವರನ್ನು ಮತ್ತಷ್ಟು ಕಷ್ಟಕ್ಕೆ ನೂಕುವುದಕ್ಕಿಂತ ಪೂರ್ಣ ಪ್ರಮಾಣದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾತ್ರ ಮಾಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಕೆಲವು ಮಾತುಗಳನ್ನು ಹೇಳಲೇಬೇಕಾಗಿದೆ. ಇವೊತ್ತು ಕುಡಿಯುವ ನೀರಿನ ವಿಚಾರದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಜನರಿಗೆ ಇರುವ ವ್ಯತ್ಯಾಸವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇವೊತ್ತು ನಗರ ಪ್ರದೇಶಗಳಲ್ಲಿ ಅಂದರೆ ಮುಂದುವರಿದ ಬೆಂಗಳೂರು, ಮಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಒಬ್ಬ ವ್ಯಕ್ತಿ ಹೋಟೆಲ್‌ನಲ್ಲಿ ರೂಮ್ ಮಾಡಿಕೊಂಡಿದ್ದರೂ ಕೂಡ ಒಂದು ಸಲ ಆತನು ಟಾಯ್ಲೆಟ್‌ನ ಉಪಯೋಗಕ್ಕಾಗಿ 10 ಲೀಟರ್‌ಗಳಷ್ಟು ನೀರನ್ನು ವ್ಯಯ ಮಾಡುತ್ತಾನೆ. ಅದೇ ಗ್ರಾಮಾಂತರ ಪ್ರದೇಶಗಳಲ್ಲಿ ಮಾರ್ಚ್‌ನಿಂದ ಮೇ ತಿಂಗಳವರೆಗೆ ಇಡೀ ದಿನ ಅಲೆದಾಡಿದರೂ ಕೂಡ ಎರಡು ಕೊಡ ನೀರನ್ನು ಸಂಗ್ರಹಿಸಲು ಪರದಾಟ ಮಾಡಬೇಕಾಗುತ್ತದೆ. ತಾವುಗಳು ಬೋರ್‌ವೆಲ್‌ಗಳನ್ನು ಹಾಕಿದ್ದರೂ ಅದು ಬೇಡಿಕೆಗೆ ಅನುಗುಣವಾಗಿ ನೀರನ್ನು ಪೂರೈಸುತ್ತಿಲ್ಲ. ಇಂಥ ದುರಂತದ ವ್ಯತ್ಯಾಸ ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಎದ್ದುಕಾಣುತ್ತಿದೆ. ಅದನ್ನು ಹೋಗಲಾಡಿಸಿ ಗ್ರಾಮಾಂತರದ ಜನರಿಗೂ ಸರಿಯಾದ ನೀರಿನ ವ್ಯವಸ್ಥೆ ಮಾಡಲು ಸರಕಾರ ಏನು ವ್ಯವಸ್ಥೆ ಮಾಡಿದೆ? ಆ ಬಗ್ಗೆ ನಾನು ಹೆಚ್ಚು ವಿವರಕ್ಕೆ ಹೋಗದಿದ್ದರೂ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಜಿಲ್ಲಾಪರಿಷತ್‌ನಲ್ಲಿರುವ ಜಿಯಾಲಜಿಸ್ಟ್ ಮತ್ತು ರಿಗ್‌ಓನರ್ ಇಬ್ಬರೂ ಸೇರಿಕೊಂಡು ಗ್ರಾಮಾಂತರ ಪ್ರದೇಶದ ಎಲ್ಲಾ ಜನರನ್ನೂ ಶೋಷಣೆ ಮಾಡುತ್ತಾ ಇದ್ದಾರೆ. ಎಲ್ಲಿ ಬೋರ್‌ವೆಲ್‌ನ ಅವಶ್ಯಕತೆ ಇದೆ, ಎಲ್ಲಿ ಅದನ್ನು ಹಾಕಬೇಕು ಆದರೆ ಅಲ್ಲಿ ತೋಡುವುದಿಲ್ಲ. ಎಲ್ಲಿ 350 ಅಡಿಗಳಷ್ಟು ಆಳಕ್ಕೆ ಹೋಗಬೇಕು ಅಲ್ಲಿ ಅಷ್ಟು ಆಳಕ್ಕೆ ಹೋಗುವುದಿಲ್ಲ. ಕೇವಲ 50-60ಅಡಿಗಳಷ್ಟು ಕೊರೆದು ದಾಖಲೆಯಲ್ಲಿ ಮಾತ್ರ 350

ಅಡಿಗಳನ್ನು ಕೊರೆದಿದ್ದೇವೆಂದು ತೋರಿಸಿ ಅಲ್ಲಿ ನೀರು ಸಿಗಲಿಲ್ಲ ಎಂದು ಹೇಳುವ ಶೋಷಣೆಯ ಕೆಲಸವನ್ನು ಅವರುಗಳು ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯ ಒಬ್ಬ ಜವಾಬ್ದಾರಿಯುತ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಹೇಳಿದ ಪ್ರಕಾರ ಒಬ್ಬ ಜಿಯಾಲಜಿಸ್ಟ್‌ಗೆ ಒಂದು ಕೆ.ಜಿ. ಮಾಂಸ, ಒಂದು ಬಾಟಲ್ ವಿಸ್ಕಿ ಕೊಟ್ಟು ಬೆಳಿಗ್ಗೆಯೇ ಅವನನ್ನು ಕಾರ್‌ನಲ್ಲಿ ಕರೆದುಕೊಂಡು ಹೋದರೆ ಮಾತ್ರ ಆತನು ಆ ಪಾಯಿಂಟ್ ನೋಡಿಕೊಂಡು ಗುರುತಿಸುತ್ತಾನೆ.

ಈ ಮಾತನ್ನು ನನಗೆ ಸರಕಾರಿ ಅಧಿಕಾರಿಗಳೇ ಹೇಳಿದ್ದು. ಇಲ್ಲದಿದ್ದರೆ ಆ ಜಿಯಾಲಜಿಸ್ಟ್ ಬರುವುದಿಲ್ಲ ಅದನ್ನು ತಪ್ಪಿಸುವುದಕ್ಕೋಸ್ಕರ ಜಿಲ್ಲಾಪರಿಷತ್ತಿನ ಬೇರೆ ಬೇರೆ ಅಧಿಕಾರಿಗಳು ತಾವೇ ಜಿಯಾಲಜಿಸ್ಟ್ ರಿಗ್‌ಓನರ್ಸ್‌ಗಳನ್ನು ಕರೆದುಕೊಂಡು ಹೋಗಿ ಅವರಿಗೆ ಬೇಕಾದ ಸ್ಥಳಗಳಲ್ಲಿ ಪಾಯಿಂಟ್‌ನ್ನು ಗುರುತಿಸುವ ಬಗ್ಗೆ ವ್ಯವಸ್ಥೆ ಮಾಡುತ್ತಾ ಇದ್ದಾರೆ. ನಾನು ಸರಕಾರಕ್ಕೆ ಸಲಹೆಯನ್ನು ಕೊಡುವುದೇನೆಂದರೆ ಎಲ್ಲಾ ಕಡೆಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದಲ್ಲಿ ನೀರು ಸಿಗುವುದಿಲ್ಲ. ಕೆಲವೊಂದು ಕಡೆಗಳಲ್ಲಿ ಹೆಚ್ಚು, ಕೆಲವೊಂದು ಕಡೆಗಳಲ್ಲಿ ಕಡಿಮೆ ನೀರು ಸಿಗುತ್ತದೆ. ಈಗ ಸರಕಾರದಲ್ಲಿ ಎರಡು ರೀತಿಯ ಪೈಪ್‌ನ್ನು ಹಾಕುವ ವ್ಯವಸ್ಥೆ ಇದೆ. 4 ಮತ್ತು 6 ಇಂಚುಗಳ ಪೈಪ್‌ನ್ನು ಹಾಕುವ ಪದ್ಧತಿ ಇದೆ. ಈಗ 4 ಇಂಚುಗಳ ಪೈಪ್‌ನ ಬದಲಾಗಿ ಎಲ್ಲಾ ಕಡೆಗಳಲ್ಲಿಯೂ 6 ಇಂಚುಗಳ ಪೈಪ್‌ನ್ನು ಹಾಕುವ ವ್ಯವಸ್ಥೆ ಮಾಡಿ ಅದಕ್ಕೆ ಸಬ್‌ಮರ್ಸಿಬಲ್‌ಪಂಪ್‌ನ್ನು ಹಾಕಿ ಬೇಕಾದಷ್ಟು ನೀರನ್ನು ಸರಬರಾಜು ಮಾಡಲು ಸಾಧ್ಯವಾಗುವಂತೆ ಮಾಡಬೇಕು.

ಇನ್ನು ನಮ್ಮ ಜಿಲ್ಲೆಯ ರಸ್ತೆಗಳ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯ ಜನರು ನಾವು ಬಹಳ ಹೆಮ್ಮೆಯಿಂದ ಹೇಳುತ್ತಾ ಇದ್ದೆವು. ನಮ್ಮ ಜಿಲ್ಲೆಗೆ ಬಂದು ನಮ್ಮ ರಸ್ತೆಗಳನ್ನು ನೋಡಿ, ಇವುಗಳು ಬಹಳಷ್ಟು ವ್ಯವಸ್ಥಿತವಾಗಿವೆ ಎಂದು ಹೇಳಿಕೊಳ್ಳುತ್ತಿದ್ದ ಒಂದು ಕಾಲ ಇತ್ತು. ದುರಾದೃಷ್ಟವಶಾತ್ ಇವೊತ್ತು ನಾವೇ ನಮ್ಮ ರಸ್ತೆಗಳನ್ನು ತುಂಬಾ ಅಸ್ತವ್ಯಸ್ತವಾಗಿವೆ ಎಂದು ಹೇಳುವ ಪರಿಸ್ಥಿತಿಯು ಬಂದಿದಿ. ಪಕ್ಕದ ರಾಜ್ಯ ಕೇರಳದಲ್ಲಿ ರಸ್ತೆಗಳು ಚೆನ್ನಾಗಿವೆ. ನಮ್ಮ ಜಿಲ್ಲೆಯಲ್ಲಿ ಬರುವ ಪ್ರಮಾಣದ ಮಳೆಯು ಇಲ್ಲಿಯೂ ಬರುತ್ತದೆ. ಆದರೆ ಕೇರಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳನ್ನು ಈಗ ಹೋಲಿಕೆ ಮಾಡಿದಾಗ ಬಹಳಷ್ಟು ಉತ್ತಮಸ್ಥಿತಿಯಲ್ಲಿ ಕೇರಳದ ರಸ್ತೆಗಳನ್ನು ಕಾಣಬಹುದಾಗಿದೆ. ನಮ್ಮ ಇಲಾಖಾ ಅಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ಇದಕ್ಕೆ ಸಂಬಂಧಪಟ್ಟ ಪರಿಕರಗಳು, ವಸ್ತುಗಳು ಜೆಲ್ಲಿ ಮತ್ತು ಡಾಂಬರ್‌ಗಳ ಸರಬರಾಜು ಸರಿಯಾಗಿ ಆಗದೇ ಇರುವುದರಿಂದ ವ್ಯವಸ್ಥಿತವಾದಂಥ ರೀತಿಯಲ್ಲಿ ಕೆಲಸವು ಆಗುತ್ತಾ ಇಲ್ಲ.

ಡಾಂಬರ್‌ನಲ್ಲಿ ಕಲಬೆರಕೆ, ಜೆಲ್ಲಿಕಲ್ಲಿನ ಕ್ವಾಲಿಟಿಯಲ್ಲಿನ ವ್ಯತ್ಯಾಸಗಳು, ಡಾಂಬರೀಕರಣವನ್ನು ಒಂದೂವರೆ ಇಂಚು ಮಾಡಬೇಕಾದರೆ ನಿಗದಿತ ಲೆಕ್ಕಾಚಾರದಲ್ಲಿ ಹಾಕದೇ ಇರುವುದು ಮುಂತಾಗಿ ಅವ್ಯವಹಾರಗಳನ್ನು ನಾವು ಕಾಣುತ್ತಾ ಇದ್ದೇವೆ. ಇದಲ್ಲದೆ ಡಾಂಬರ್ ಹಾಕಿದ ನಂತರ ಅದು ಪುನಃ ಜೂನ್ ಜುಲೈನಲ್ಲಿ ಮಳೆ ಬಂದಾಗ ಪೂರ್ತಿ ನಶಿಸಿಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಸರ್ಕಾರದಲ್ಲಿ ವಿನಂತಿಸುವುದು ಇಷ್ಟೆ ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಿದ್ದೀರಿ, ಗಡಿ ಅಭಿವೃದ್ಧಿ ಯೋಜನೆ ಮಾಡಿದ್ದೀರಿ, ಬಯಲುಸೀಮೆ ಯೋಜನೆ ಮಾಡಿಕೊಂಡಿದ್ದೀರಿ, ಇದೆಲ್ಲದರ ಬದಲಿಗೆ

ಮಹಾರಾಷ್ಟ್ರದಲ್ಲಿ ಒಬ್ಬ ಶಾಸಕನಿಗೆ ಅವನ ಕ್ಷೇತ್ರದ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗಾಗಿ ಒಂದು ಕೋಟಿ ರೂಪಾಯಿಯನ್ನು ನಿಗದಿಮಾಡಿದ್ದಾರೆ. ಕರ್ನಾಟಕದಲ್ಲೂ ಒಬ್ಬ ಶಾಸಕನ ಕಾರ್ಯಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿ ನಿಗದಿಮಾಡಿ. ಬೇರೆ ಬೇರೆ ಯೋಜನೆಗಳ ಬದಲಿಗೆ ಈ ವ್ಯವಸ್ಥೆ ತಂದರೆ ಶಾಸಕನು ತನ್ನ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಶಾಶ್ವತವಾಗಿ ಮಾಡಿಕೊಳ್ಳಲಿಕ್ಕೆ ಸಾಧ್ಯವಿದೆ. ಇದರಲ್ಲಿ ದೊಡ್ಡ ಅಂಕಿಅಂಶಗಳೇನಿಲ್ಲ. ಮಹಾರಾಷ್ಟ್ರದಲ್ಲಿ ಬಹಳ ಗ್ರಾಮೀಣ ಪ್ರದೇಶಗಳಿರಬಹುದು, ತಾವೇನು ಈಗ 15-20-25 ಲಕ್ಷ ರೂಪಾಯಿ ಕೊಡುತ್ತಿದ್ದೀರಿ ಎರಡು ಪ್ರಾಮುಖ್ಯವಾದ ರಸ್ತೆಗಳು ಮತ್ತು ಎರಡು ನೀರು ಸರಬರಾಜು ಯೋಜನೆಗಳಿಗೆ ಅದು ಮುಗಿಯುತ್ತದೆ. ಉಳಿದ ಕೆಲಸ ಜರುಗಿಸುವ ಮತ್ತು ಶಾಸನಸಭೆಯ ಸದಸ್ಯರ ಗೌರವ ಹೆಚ್ಚಿಸುವ ದೃಷ್ಟಿಯಲ್ಲಿ ಒಬ್ಬ ಶಾಸಕನಿಗೆ ಒಂದು ಕೋಟಿ ರೂಪಾಯಿ ಅನುದಾನದ ವ್ಯವಸ್ಥೆ ಮಾಡಿಕೊಡಬೇಕು ಎಂದು ನಾನು ವಿನಂತಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಕೆಲವು ವಿಚಾರಗಳನ್ನು ನಾನು ಓದಿ ಹೇಳುತ್ತೇನೆ, ಗ್ರಾಮೀಣಾಭಿವೃದ್ಧಿ ಬಗ್ಗೆ ಸಲಹೆಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಸರ್ವತೋಮುಖ ಅಭಿವೃದ್ಧಿಗೆ ಗ್ರಾಮೀಣ ಕೈಗಾರಿಕೆಗಳ ಪುನಶ್ಚೇತನವಾಗಬೇಕು. 21ನೇ ಶತಮಾನಕ್ಕೆ ಪಾದಾರ್ಪಣೆ ಮಾಡುವ ಸಂದರ್ಭದಲ್ಲಿ ರಾಜ್ಯದ ಗ್ರಾಮೀಣ ಕೈಕಸುಬುಗಳು ಕುಲಕಸುಬುಗಳು ಹಿಂದಿಗಿಂತ ಹೆಚ್ಚು ಹೊಸವಾಗಬೇಕು ಮತ್ತು ಬದಲಾಗಬೇಕು ಈ ದೃಷ್ಟಿಯಲ್ಲಿ ಹೊಸ ತಂತ್ರಜ್ಞಾನ, ಹಣಕಾಸಿನ ನೆರವು ಮಾರುಕಟ್ಟೆ ಸೌಲಭ್ಯ ಹೆಚ್ಚಬೇಕು. ಇಲ್ಲದಿದ್ದರೆ ಮುಕ್ತ ಮಾರುಕಟ್ಟೆಯಲ್ಲಿ ಬಲ ಇದ್ದವನು ಬದುಕಿ ಬಲ ಇಲ್ಲದವನು ಸಾಯುತ್ತಾನೆ. ಹೀಗಾಗಿ ಗ್ರಾಮೀಣ ಜನರ ಕಲಾಕೌಶಲ್ಯಗಳು ಕಮರಿಹೋಗುವ ಸಾಧ್ಯತೆ ಇರುವುದರಿಂದ ಗ್ರಾಮೀಣ ಕೈಗಾರಿಕೆಗಳಿಗೆ ಚಾಲನೆ ಕೊಟ್ಟು ಅಭಿವೃದ್ಧಿ ದಿಸೆಯಲ್ಲಿ ಮುಂದೊಯ್ಯಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಗ್ರಾಮೀಣ ಕೈಗಾರಿಕೆಗಳನ್ನು ಗುರ್ತಿಸಿ ಅವುಗಳ ಬಗ್ಗೆ ಅಧ್ಯಯನ ಮಾಡಿ ಚಾಲನೆ ಕೊಡುವುದು. ಎರಡನೆಯದಾಗಿ ಗ್ರಾಮೀಣ ಕೈಗಾರಿಕೆಗ್ಗಳಿಗೆ ಪುನಶ್ಚೇತನ ಕೊಡಬೇಕು, ಶಿಕ್ಷಣ ತರಬೇತಿ ಕೊಡುವುದು, ಸಹಕಾರ ಸಂಘಗಳ ಮೂಲಕ ಹಣಕಾಸು ನೆರವು ಒದಗಿಸುವುದು ರಾಜ್ಯ ಮಟ್ಟದಲ್ಲಿ ಸಂಶೋಧನೆ ವಿಕೇಂದ್ರೀಕರಣ ಮಾರುಕಟ್ಟೆ ವ್ಯವಸ್ಥೆ ತಾಂತ್ರಿಕ ನೆರವು ನೀಡುವುದು ಸರಳತೆ ಮತ್ತು ಸುಲಭ ವಿಧಾನಗಳನ್ನು ಅನುಷ್ಠಾನಿಸಲು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುವುದು.

ಸ್ವಾವಲಂಬಿ ಉದ್ಯೋಗ ಕಲ್ಪಿಸಿ ಅವರ ಅಭಿವೃದ್ಧಿ ಸಾಧಿಸಲು ತಾವು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಇನ್ನು ದಶಲಕ್ಷ ಬಾವಿಗಳ ಬಗ್ಗೆ ಹೇಳುವುದಾದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಇರುವ ಇವತ್ತಿನ ವ್ಯವಸ್ಥೆಯಲ್ಲಿ ಬಹಳ ಭ್ರಷ್ಟಾಚಾರ ಆಗುತ್ತಿದೆ. ದಾಖಲೆಯಲ್ಲಿ ಯಾರೋ ಒಬ್ಬರಿಗೆ ಯೋಜನೆಯಡಿ ವ್ಯವಸ್ಥೆ ಮಾಡಿಕೊಂಡು ಆ ಬಾವಿಯನ್ನು ಇನ್ನೊಂದು • ಸರ್ವೆ ನಂಬರಿನಲ್ಲಿ ತೋಡುವಂತಹ ವಿಚಿತ್ರ ಪರಿಸ್ಥಿತಿ ದಕ್ಷಿಣ ಕನ್ನಡದಲ್ಲಿ ಮತ್ತು ಹಲವಾರು ಸಲ ಜಿಲ್ಲಾಪರಿಷತ್ ಮತ್ತು ತಾಲ್ಲೂಕು ಸಭೆಗಳಲ್ಲಿ ಉಲ್ಲೇಖಗೊಂಡಿದೆ. ಈ ಬಗ್ಗೆ ಕಾರ್ಯಕ್ರಮಗಳನ್ನು ಅಳವಡಿಸಬೇಕೆಂದು ವಿನಂತಿಮಾಡುತ್ತಿದ್ದೇನೆ. ಜೊತೆಗೆ ಆರ್‌ಟಿಸಿ ಬಗ್ಗೆ, ನಮ್ಮ ದಕ್ಷಿಣ ಕನ್ನಡದಲ್ಲಿ ಜಂಟಿಕುಟುಂಬಗಳುಂಟು ಪಟ್ಟಾ 100-150 ವರ್ಷದಷ್ಟು ಹಿಂದಿನ ತಲೆಮಾರಿನ ಒಬ್ಬ ವ್ಯಕ್ತಿಯಲ್ಲಿ ಆಗಿದ್ದರೆ ಈಗ ಅನುಭವಿಸುವಾಗ ಬೇರೆಬೇರೆ ಕವಲುಗಳಾಗಿರುತ್ತವೆ. ಬೇರೆ

ಬೇರೆ ಉದ್ಯೋಗದಲ್ಲಿರುವ ಅವರ ಹಕ್ಕು ಬೇರೆ ಬೇರೆ ಇರುವುದರಿಂದ ರೈತ ಅವನ ಜಮೀನನ್ನು ಅನುಭವಿಸುತ್ತಿದ್ದಾನೆ ಅವನಿಗೆ ದುರಾದೃಷ್ಟವಶಾತ್ ಆರ್‌ಟಿಸಿ ಕೊಡುವ ವ್ಯವಸ್ಥೆ ಇರುವುದಿಲ್ಲ. ಈ ಬಗ್ಗೆ ಸೂಕ್ತ ತಿದ್ದುಪಡಿಗಳಿಗಾಗಿ ಗಮನಹರಿಸಬೇಕೆಂದು ನಾನು ವಿನಂತಿಸುತ್ತೇನೆ. ಕಡೆಯದಾಗಿ ಮೀನುಗಾರಿಕೆ ಬಗ್ಗೆ ಮೀನುಗಾರಿಕಾ ಸಚಿವರಲ್ಲಿ ವಿನಂತಿಸುತ್ತಿದ್ದೇನೆ. ದಯಮಾಡಿ ಮೀನುಗಾರರ ಕುಟುಂಬಗಳಿಗೆ ವಸತಿ ಹಂಚುವ ಕಾರ್ಯಕ್ರಮ ರೂಪಿಸುತ್ತಿದ್ದೀರಾ? ಸಮುದ್ರ ತಡೆಗೋಡೆಗಾಗಿ ಕಾರ್ಯಕ್ರಮ ಹಮ್ಮಿಕ್ಕೊಳ್ಳುತ್ತಿದ್ದೀರಾ? ನನಗೆ ಗೊತ್ತಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಡೆಗೋಡೆಗಾಗಿ ಇನ್ನೂ 5 ಕೋಟಿ ರೂಪಾಯಿ ಬಿಡುಗಡೆ ಮಾಡಿಲ್ಲ ಅದರ ಬದಲಿಗೆ ವ್ಯವಸ್ಥಿತವಾಗಿ ತಡೆಗೋಡೆ ನಿರ್ಮಿಸಬೇಕು.

ಅಲ್ಲದೆ ಮೀನುಗಾರರಲ್ಲದೆ ಬೇರೆಯವರು ಸಮುದ್ರದ ಬದಿಯಲ್ಲಿ ವಸತಿ ನಿರ್ಮಿಸದಂತೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಂಡರೆ ಬಹಳ ಅನುಕೂಲವಾಗುತ್ತದೆ. ಪರಿಹಾರ ಹಂಚುವಾಗ ಇಂತಹ ಜನಗಳೇ ಪರಿಹಾರ ತೆಗೆದುಕೊಳ್ಳುವುದನ್ನು ಆಗಗೊಡಲು ತಾವು ಕಾರ್ಯಕ್ರಮ ಹಮ್ಮಿಕ್ಕೊಳ್ಳಬೇಕೆಂದು ವಿನಂತಿಸುತ್ತಾ ನಮ್ಮ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಅತಿವೃಷ್ಟಿ ಅನಾದೃಷ್ಟಿಯಿಂದ ಬಹಳ ತೊಂದರೆಗೆ ಒಳಗಾಗಿದ್ದಾರೆ. ಹಿಂದಿನ ವರ್ಷಕ್ಕಿಂತ ಈ ವರ್ಷ ಮೂರನೇ ಎರಡು ಭಾಗ ಮಳೆ ಕಡಿಮೆಯಾಗಿದೆ. ಕಳೆದ ಐದಾರು ವರ್ಷಗಳಲ್ಲಿ ಯಾವುದೇ ಜಮೀನಿನಲ್ಲಿ ಕೃಷಿಯಾಗಲಿಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ಬರಗಾಲಪೀಡಿತ ಜಿಲ್ಲೆಯೆಂದು ಘೋಷಿಸಿ ಕೃಷಿಕರಿಗೆ ಬೇಕಾದ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಆರೋಗ್ಯ ಇಲಾಖೆಯಲ್ಲಿ 162 ಪುರುಷ ವೈದ್ಯಾಧಿಕಾರಿಗಳ ಹುದ್ದೆಗಳಲ್ಲಿ 27 ಹುದ್ದೆಗಳು ಖಾಲಿ ಇರುತ್ತವೆ. ಹಾಗೂ 27 ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳಲ್ಲಿ 7 ಹುದ್ದೆಗಳು ಖಾಲಿ ಇದ್ದು ಇವುಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ತಕ್ಷಣ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 74 ವಾಹನ ಚಾಲಕರ ಹುದ್ದೆಗಳಲ್ಲಿ 41 ಹುದ್ದೆಗಳು ಖಾಲಿ ಇದ್ದು ಇವುಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಕೋರಿದೆ.

ಜಿಲ್ಲೆಯಲ್ಲಿ 24 ಪಂಚಾಯತ್ ವಿಸ್ತರಣಾ ಅಧಿಕಾರಿಗಳ ಹುದ್ದೆಗಳಿದ್ದು 19 ಖಾಲಿ ಇರುವ ಹುದ್ದೆಗಳನ್ನು ಜರೂರು ಭರ್ತಿ ಮಾಡುವಂತೆ ಕೋರಿದೆ. ಜಿಲ್ಲೆಯಲ್ಲಿ 354 ಗ್ರಾಮಪಂಚಾಯಿತಿಗಳು ಇದ್ದು ಇವುಗಳಲ್ಲಿ 55 ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇರುತ್ತವೆ, ಈ ಹುದ್ದೆಗಳನ್ನು ಭರ್ತಿ ಮಾಡುವಂತೆ ಕೋರಿದೆ. ಇಂಜಿನಿಯರಿಂಗ್ ಉಪವಿಭಾಗ ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಗಳಲ್ಲಿ 18ಕಿರಿಯ ಇಂಜಿನಿಯರ್‌ಗಳ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವಂತೆ ಕೋರಿದೆ. ಆಡಳಿತ ಮಂಜೂರಾತಿ ನೀಡುವ ಬಗ್ಗೆ ಹೇಳುವುದಾದರೆ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಕಾಮಗಾರಿಗಳ ಅಂದಾಜುಪಟ್ಟಿಗೆ ಆಡಳಿತ ಮಂಜೂರಾತಿ ನೀಡಲು ರೂ. 10,00,000ಕ್ಕೆ ಪ್ರಕೃತ ಅಧಿಕಾರ ಇರುತ್ತದೆ. ಈ ಮಿತಿಯನ್ನು 15,00,000ಕ್ಕೆ ಏರಿಸಿ ಆಡಳಿತ ಮಂಜೂರಾತಿ ಅಧಿಕಾರ ನೀಡಲು ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಡಬೇಕೆಂದು ಒತ್ತಾಯಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಾಂಬರೀಕರಣವನ್ನು

ಸಾಮಾನ್ಯವಾಗಿ ಡಿಸೆಂಬರ್‌ನಿಂದ ಮೇ ತಿಂಗಳ ವರೆಗೆ ಮಾತ್ರ ಕೈಗೊಳ್ಳಲು ಸಾಧ್ಯವಿರುವುದರಿಂದ ಉಳಿದ ಕಾಲಾವಧಿಯಲ್ಲಿ ಮಳೆಯಿಂದ ಅಸಾಧ್ಯವಿರುತ್ತದೆ.

ಆದ್ದರಿಂದ ಈ ಅವಧಿಯಲ್ಲಿ ಡಾಂಬರೀಕರಣವನ್ನು ತ್ವರಿತಗತಿಯಲ್ಲಿ ಮಾಡಬೇಕಾಗಿರುತ್ತದೆ. ಆದರೆ ಡಾಂಬರಿನ ಕೊರತೆಯಿಂದಾಗಿ ಈ ಕೆಲಸವನ್ನು ಮಾಡಲು ತೊಂದರೆಯಾಗುತ್ತಿದೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಈ ಕಾಲಾವಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಡಾಂಬರನ್ನು ಒದಗಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ. ಜಿಲ್ಲೆಯ್ಲಿ ವಸತಿ ಕಾಮಗಾರಿಗಳಿಗಾಗಿ ಸ್ಥಳೀಯವಾಗಿ ಲಭ್ಯವಿರುವ ಮತ್ತು ಉತ್ತಮ ಗುಣಮಟ್ಟವನ್ನು ಹೊಂದಿರುವ ತಾಳೆ ಮತ್ತು ತೆಂಗಿನ ಪಕ್ಕಾಸುಗಳನ್ನು ಉಪಯೋಗಿಸುವುದು ಹಿಂದಿನಿಂದ ಬಂದ ಪದ್ಧತಿಯಾಗಿರುತ್ತದೆ, ಇವುಗಳನ್ನು ಆಶ್ರಯ, ಅಂಬೇಡ್ಕರ್ ಇಂದಿರಾ ಅವಾಸ್ ಮನೆಗಳಲ್ಲಿ ಉಪಯೋಗಿಸುವಂತಾದರೆ ನಿರ್ದಿಷ್ಟ ಮೊತ್ತದೊಳಗೆ ಕುಟುಂಬಗಳು ಮನೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಈ ವಿಚಾರವನ್ನು ತಾವು ಗಮನಿಸಬೇಕು. 1995-96ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಗೆ 2,000 ಮನೆಗಳ ಭೌತಿಕ ಗುರಿ ನಿಗದಿಪಡಿಸಲಾಗಿದ್ದು ಅದರಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಬಿಡುಗಡೆಯಾಗಬೇಕಾದ ಸಹಾಯಧನ 252 ಲಕ್ಷ, ಹುಡ್ಕೊ ಸಾಲ 215 ಲಕ್ಷ, ಸಮಾಜ ಕಲ್ಯಾಣ ಇಲಾಖೆಯಿಂದ 64.40 ಲಕ್ಷ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಶೌಚಾಲಯಕ್ಕಾಗಿ 28 ಲಕ್ಷ ಒಟ್ಟು 560 ಲಕ್ಷ ರೂಪಾಯಿಗಳು. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಸಹಾಯಧನಬಾಬ್ತು.

ಈವರೆಗೆ 399.47 ಲಕ್ಷ್ಯ ಮಾತ್ರ ಬಿಡುಗಡೆಯಾಗಿದ್ದು .2800 ಮನೆಗಳ ಪೈಕಿ ಬಾಕಿ ಅಂತ್ಯಕ್ಕೆ 2439 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು 246 ಲಕ್ಷ ರೂಪಾಯಿಗಳು ಬೇಕಾಗಿರುತ್ತದೆ. ತಕ್ಷಣ ಅದನ್ನು ಬಿಡುಗಡೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನು ನಮ್ಮ ಜಿಲ್ಲೆಯ ಸಮಸ್ಯೆಗಳ ಬಗ್ಗೆ ನಾಲ್ಕು ವಿಚಾರಗಳನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ವಿಶಿಷ್ಟವಾದ ಮೂಲಹಕ್ಕಿನ ಗೇಣಿದಾರರಿದ್ದಾರೆ. ಮೂಲಗೇಣಿದಾರರು ಭೂಸುಧಾರಣೆ ಕಾನೂನು ಮೂಲಕ ಡಿಕ್ಲರೇಷನ್ ಕೊಡಲು ಕಾಲಾವಕಾಶ ನೀಡುವುದು. ದಿನಾಂಕ 1.3.74ರ ನಂತರ ಕರ್ನಾಟಕ ಭೂ ಸುಧಾರಣಾ ಕಾನೂನಿನನ್ವಯ ಸದರಿ ಕಾನೂನಿನಲ್ಲಿ ತಿಳಿಸಿದ ಗೇಣಿ ಹೊರತು ಯಾವುದೇ ಇತರ ಗೇಣಿ ಮುಂದುವರೆಸಲು ಅವಕಾಶವಿರುವುದಿಲ್ಲ ಎಲ್ಲಾ ಗೇಣಿ ಜಮೀನುಗಳು ಈ ದಿನದಿಂದ ಸರ್ಕಾರದ ವಶಕ್ಕೆ ಬಂದಿರುತ್ತವೆ.

ಮಾಜಿ ಗೇಣಿದಾರರಿಗಾಗಿ ಪುನಃ ಮಂಜೂರಾತಿ ಕ್ರಮ ಜರುಗಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಲಗೇಣಿ ಒಂದು ವರ್ಷ ಗೇಣಿಯಾಗಿದ್ದು ಸಾವಿರಾರು ಮೂಲ ಗೇಣಿದಾರರು ತಮ್ಮ ಭಾಗದ ಕಳೆದ ಹಂತವೆಂದೇ ಭಾವಿಸಿ ಆ ಗೇಣಿ ರದ್ದುಪಡಿಸಿ ಪುನರ್ ಮಂಜೂರಾತಿ ಮಾಡಲು ಡಿಕ್ಲರೇಶನ್ ಸಲ್ಲಿಸಲು ಅವಕಾಶವಿರುವುದಿಲ್ಲ. ಈ ಕಾರಣದಿಂದ ಈಗಲೂ ಕಂದಾಯ ದಾಖಲೆಯಲ್ಲಿ ಮೂಲಗೇಣಿಯನ್ನು ಮುಂದುವರೆಸುತ್ತಿದ್ದು ಕಾನೂನಿನನ್ವಯ ಇದು ತಪ್ಪಾಗುತ್ತದೆ. ಕಾನೂನನ್ನು ಪೂರ್ತಿ ಅನುಷ್ಠಾನ ಮಾಡಿದರೆ ಈ ಜಮೀನುಗಳು ಸರ್ಕಾರದ ಸುಪರ್ದಿಗೆ ಬರಬೇಕಾಗಿರುವುದರಿಂದ ಮತ್ತು ಮೂಲಗೇಣಿದಾರರಿಗೆ ತೊಂದರೆಯಾಗುವ ಸಂಭವ ಇರುವುದರಿಂದ ಮೂಲಗೇಣಿದಾರರಿಗೆ ಸಾಕಷ್ಟು ತಿಳುವಳಿಕೆ ಇಲ್ಲದೆ ಅವರು ಡಿಕ್ಲರೇಷನ್ನಾಡಲು ಸಾಧ್ಯವಾಗಿರುವುದಿಲ್ಲ. ಇಂತಹ ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರಿವೆ. ಕರ್ನಾಟಕ ಭೂಸುಧಾರಣಾ ಕಾನೂನನ್ನು ಪೂರ್ಣ ಅನುಷ್ಠಾನಗೊಳಿಸಲು ಇಂತಹ

ಮೂಲಗೇಣಿದಾರರಿಗೆ ಡಿಕ್ಲರೇಷನ್ ಕೊಡಲು ಇನ್ನೂ 6 ತಿಂಗಳು ಕಾಲಾವಕಾಶ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಇನ್ನು ಭೂಸುಧಾರಣಾ ಕಾಯಿದೆಯ ನಿಯಮ 122ಎಗೆ ತಿದ್ದುಪಡಿ ತರುವ ಬಗ್ಗೆ ನಿಯಮ 122ಎ ಅನ್ವಯ ಅಧಿನಿಯಮ 9/92ಕ್ಕೆ ಬದಲಾಗಿ ಸೇರಿಸಿರುವಂತೆ ಭೂನ್ಯಾಯಮಂಡಲಿ ಕಲಂ 66ರಲ್ಲಿ ಹೊರಡಿಸಿರುವ ಆದೇಶವನ್ನು ಆದೇಶದ ದಿನಾಂಕದಿಂದ 2 ವರ್ಷಗಳ ಅವಧಿಯೊಳಗೆ ಅಥವಾ 31.12.95ರೊಳಗೆ ಯಾವುದು ನಂತರವೋ ಆ ದಿನಾಂಕದೊಳಗೆ ಮಾತ್ರ ಭೂನ್ಯಾಯ ಮಡಲಿಗೆ ವಿಮರ್ಶೆಗೆ ಅವಕಾಶ ಕಲ್ಪಿಸಲಾಗಿದೆ.

ಆದರೆ ಜನವರಿ 1994ರಿಂದ ನವೆಂಬರ್ 1995ರವರೆಗೆ ಭೂನ್ಯಾಯ ಮಂಡಲಿಗಳು ಅಸ್ತಿತ್ವದಲ್ಲಿ ಇರಲಿಲ್ಲ. ಸರಕಾರದ ಅಧಿಸೂಚನೆ ನಂ. ಆರ್.ಡಿ. 151 ಎಲ್.ಆರ್ಎ. : 95 ದಿನಾಂಕ 22.11.95 ಮತ್ತು 20.11.95ರನ್ವಯ ಭೂನ್ಯಾಯ ಮಂಡಲಿಗಳನ್ನು ಪುನರ್ ರಚಿಸಲಾಗಿದೆ. ಬೆಳ್ತಂಗಡಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಲವು ಹಿಂದಿನ ಪ್ರಕರಣಗಳನ್ನು ಭೂ ಸುಧಾರಣಾ ಕಾಯಿದೆಯ ಕಲಂ 122(ಎ)ಗೆ ಸೂಕ್ತ ತಿದ್ದುಪಡಿಯನ್ನು ತಂದು ಕಲಂ 66ರಂತೆ ಹೊರಡಿಸಿರುವ ಆದೇಶಗಳನ್ನು ಪುನರ್ ವಿಮರ್ಶಿಸುವ ಅಧಿಕಾರವನ್ನು ಕಡಿಮೆ ಪಕ್ಷ ಒಂದು ವರ್ಷ ಅವಧಿಗಾದರೂ ಮುಂದುವರಿಸುವುದು ಅವಶ್ಯಕವೆಂದು ಸರಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು : ತಾವು ಪುಸ್ತಕ ನೋಡಿಕೊಂಡು ಓದುತ್ತಿದ್ದರೆ ಹೇಗೆ ಸಮಯ ವೇಸ್ಟಾಗುತ್ತದೆ ನಿಮ್ಮವರಿಗೇ ಸಮಯ ಸಾಕಾಗುವುದಿಲ್ಲ.

ಶ್ರೀ ಕೆ. ಜಯರಾಮ ಶೆಟ್ಟಿ : ಇನ್ನೊಂದು ವಿಷಯವೇನೆಂದರೆ, ನಮ್ಮಲ್ಲಿ ಕೆಲವು ನಗರ ಪ್ರದೇಶಗಳು ಇವೆ, ಗ್ರಾಮಾಂತರ ಪ್ರದೇಶಗಳು ಇವೆ. ಅಕ್ರಮ ಸಕ್ರಮದ ಬಗ್ಗೆ ಏನು ಅರ್ಜಿ ಹಾಕಿದ್ದಾರೆ. ಆ ಸಂದರ್ಭದಲ್ಲಿ ಅವರು ಗ್ರಾಮಾಂತರ ಪ್ರದೇಶದಲ್ಲೇ ಇದ್ದರು. ವಿಶೇಷವಾಗಿ ಕುಮಕಿ ಹಕ್ಕು ನಂತರ ಬೇರೆ ಬೇರೆ ಕಾರಣಗಳಿಗೋಸ್ಕರ ಅದನ್ನು ನಗರ ಪ್ರದೇಶಗಳಿಗೆ ಸೇರ್ಪಡೆಗೊಳಿಸಿದೆ. ಸ್ವಾಭಾವಿಕವಾಗಿ ಅವರ ಹಕ್ಕಿನಿಂದ ಅವರ ಅನುಭವದಿಂದ ಅವರಿಗೆ ಸಿಗುವ ವ್ಯವಸ್ಥೆಯಿಂದ ಅವರು ವಂಚಿತರಾಗಿದ್ದಾರೆ. ತಾವೇನು ಅಕ್ರಮ ಸಕ್ರಮ ಕಾನೂನನ್ನು ಜಾರಿಗೆ ತಂದಿದ್ದೀರಿ ಆಗ ಯಾವ ಸಂದರ್ಭದಲ್ಲಿ ಯಾವ ವ್ಯವಸ್ಥೆಗಳು ಬಿಟ್ಟು ಹೋಗಿವೆ ಆ ರೈತರಿಗೆ ಆ ಜನರಿಗೆ ಇದರ ಅವಕಾಶ ಸಿಗುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕಾಗಿ ನಾನು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ತಾವು ನನಗೆ ಬಹಳಷ್ಟು ಸಮಯವನ್ನು ಕೊಟ್ಟಿದ್ದೀರಿ ತಮಗೆ ವಂದನೆಯನ್ನು ಸಲ್ಲಿಸಿ, ಬಹಳಷ್ಟು ವಿಚಾರಗಳು ಬಾಕಿ ಇವೆ. ಇನ್ನೊಂದು ಸಲ ಅಧಿವೇಶನದಲ್ಲಿ ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೇ, ಸರಕಾರದವರು ಇವತ್ತು ಸಲ್ಲಿಸಿರತಕ್ಕಂತಹ ಅನೇಕ ಬೇಡಿಕೆಗಳನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ಇಚ್ಛೆಪಟ್ಟು ನಿಂತಿದ್ದೇನೆ. ನಾನು ಕಾಲದ ಇತಿಮಿತಿಯನ್ನು ಅರಿತು ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ವಿಧಾನ ಸಭೆ ಕಳೆದ ಒಂದೂವರೆ ತಿಂಗಳಿನಿಂದ ನಡೆದಂತಹ ಸಂದರ್ಭದಲ್ಲಿ ದಿನಕ್ಕೆ ಎರಡು ಸಾರಿ ಮೂರು ಸಾರಿ ಕೂಡ ಅನೇಕ ಸಂದರ್ಭದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಬರೀ ನೀರಾವರಿ ಬಗ್ಗೆ ಹೆಚ್ಚು ಚರ್ಚೆ ಮಾಡಿದ್ದೇವೆ. ಈ ಸದನದ ಎಲ್ಲಾ ಕಾರ್ಯಕಲಾಪಗಳನ್ನು ಮೊಟಕುಗೊಳಿಸಿ ನೀರಾವರಿಗೋಸ್ಕರ ಹೆಚ್ಚು

ಕಾಲವನ್ನು ವ್ಯಯ ಮಾಡಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ನನಗೆ ಇದರ ಹಿನ್ನೆಯ ಏನೆಂದು ಅರ್ಥವಾಗುತ್ತಿಲ್ಲ. ಒಂದು ಕಡೆ ಕಾವೇರಿ, ಇನ್ನೊಂದುಕಡೆ ಕೃಷ್ಣ ಎರಡೂ ವಿವಾದಗಳು ಏಕಕಾಲಕ್ಕೆ ಕರ್ನಾಟಕಕ್ಕೆ ಆವರಿಸತಕ್ಕಂತಹ ಒಂದು ಸಂದರ್ಭ ಏನು ಇದೆ, ಇದರ ಹಿನ್ನೆಲೆ ಏನು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಬಹುಶಃ ನಿನ್ನೆ ದೆಹಲಿಯಲ್ಲಿ ಸಭೆ ನಡೆದಂತಹ ಸಂದರ್ಭ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡಾಗ ನನಗನ್ನಿಸುತ್ತದೆ.

ಇವತ್ತು ನೀರಾವರಿ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ಸೂಕ್ತವೆಂದು ನಾನು ಭಾವನೆ ಮಾಡಿದ್ದೇನೆ. ನಾವು ಸಭೆಯಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೋರಿದಾಗ ಅವಕಾಶ ಸಿಗದೇ ಇದ್ದುದರಿಂದ ಈಗ ಪ್ರಸ್ತಾಪ ಮಾಡತಕ್ಕಂಥಾದ್ದು ಸರಿ ಎನ್ನುವ ದೃಷ್ಟಿಯಿಂದ ನಾನು ಪ್ರಸ್ತಾಪ ಮಾಡುತ್ತೇನೆ. ನಾನು ಬಹಳ ಪ್ರಾಮುಖ್ಯವಾಗಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರತಕ್ಕಂತಹ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೃಷ್ಣಾ ಜಲಾನಯನ ಪ್ರದೇಶದ ಬಗ್ಗೆ ಜನರ ಭಾವನೆ ಏನು ಇದೆ ಎಂದರೆ ಅದು ಸೀಮಿತವಾಗಿ ಕೇವಲ ಗುಲ್ಬರ್ಗ, ಅಥವಾ ರಾಯಚೂರು ಅಥವಾ ಬಿಜಾಪುರಕ್ಕೆ ಸಂಬಂಧಪಟ್ಟಂತೆ ಇದೆ ಎಂಬ ಭಾವನೆ ಇದೆ. ನಿಜವಾಗಿ ಅದು ಅಲ್ಲ. ಇವತ್ತು ಕೃಷ್ಣಾ ಜಲಾನಯನ ಪ್ರದೇಶ ಪ್ರಾರಂಭವಾಗತಕ್ಕಂಥಾದ್ದು ನನ್ನ ಕ್ಷೇತ್ರದಿಂದಲೇ ನಾವೆಲ್ಲಾ ಆ ಕಣಿವೆಯ ವ್ಯಾಪ್ತಿಗೆ ಬರತಕ್ಕಂತಹವರು. ಕರ್ನಾಟಕದ ಸುಮಾರು 60 ಭಾಗ ಕೃಷ್ಣಾ ಜಲಾನಯನ ಪ್ರದೇಶ ಆವರಿಸಿಕೊಂಡಿರತಕ್ಕ ಸಂದರ್ಭದಲ್ಲಿ ನಾವು ಈ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರತಕ್ಕಂತಹ ನೀರಿನ ಪ್ರಮಾಣ ಅದು ಯಾವ ರೀತಿಯಲ್ಲಿ ಉಪಯೋಗವಾಗಬೇಕೆಂಬ ಬಗ್ಗೆ ಮತ್ತು ಅನೇಕ ತರಹವಾದಂತಹ ಪ್ರಸ್ತಾಪಗಳಾಗಿರುವಂತಹ ಹಿನ್ನೆಲೆಯಲ್ಲಿ ನಾನು ಇವತ್ತು ಹೇಳುತ್ತೇನೆ.

ಈಗಾಗಲೇ ನಮಗೆ ಎಲ್ಲರಿಗೂ ತಿಳಿದಿರುವಂತೆ ಬಚಾವತ್ ತೀರ್ಪು ಹೊರಬಿದ್ದು ಸುಮಾರು 20-25 ವರ್ಷಗಳೇ ಕಳೆದಿವೆ. ನಮ್ಮ ಕರ್ನಾಟಕದ ಮಟ್ಟಿಗೆ 757 ಟಿಎಂಸಿ ವಾಟರ್ ಮೇಲೆ ನಮಗೆ ಹಕ್ಕು ಇದೆ. ಸ್ಕೀಮ್(ಎ) ಪ್ರಕಾರ ನಾವು ಉಪಯೋಗಿಸಬೇಕಾಗಿದೆ. ಈ 757 ಟಿಎಂಸಿಯಲ್ಲಿ ತಮಿಳುನಾಡಿಗೆ ಕೊಡತಕ್ಕಂತಹ 5 ಟಿ.ಎಂ.ಸಿ. ನೀರನ್ನು ನಾವು ಶೇಖರಣೆ ಮಾಡಬೇಕಾಗಿದೆ. ಗೋದಾವರಿ ಡೈವರ್ಷನ್ನಿಂದ ಬರತಕ್ಕಂತಹ 23 ಟಿ.ಎಂ.ಸಿ. ನೀರನ್ನೂ ನಾವು ಉಳಿಸಿಕೊಳ್ಳಲೇಬೇಕಾಗಿದೆ. 1-5-2000 ವರ್ಷದೊಳಗೆ ಇದು ಮುಗಿಯಬೇಕಾಗಿದೆ. ಎರಡು ಸಾವಿರ ವರ್ಷವೆಂದರೆ ಇನ್ನೂ ಎಲ್ಲೋ ಇದೆ ಎನ್ನುವ ಭಾವನೆ ಬೇಡ. ಕೇವಲ ಇನ್ನು 4 ವರ್ಷಗಳಲ್ಲಿ ನಾವು ನೀರಿನ ಸಂಪೂರ್ಣವಾದ ಹಕ್ಕನ್ನು ಪಡೆಯಬೇಕಾಗುತ್ತದೆ ಅದು ನಮ್ಮ ಜವಾಬ್ದಾರಿ. ಅನೇಕ ಸರಕಾರಗಳು ಬಂದು ಹೋಗಿರಬಹುದು. ಶಾಸನಸಭಾ ಸದಸ್ಯರುಗಳು ಬಂದು ಹೋಗಿರಬಹುದು. ಶಾಸನ ಸಭೆಯ ಸದಸ್ಯರುಗಳು ಬಂದು ಹೋಗಿರಬಹುದು. ಅತ್ಯಂತ ಜವಾಬ್ದಾರಿ ಈ ವಿಧಾನಸಭೆಗೆ ಆಯ್ಕೆಯಾಗಿರುವ ಪ್ರತಿನಿಧಿಗಳ ಮೇಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಕಾರಣ ಏನೆಂದರೆ ಒಂದು ಕಡೆ ಕಾವೇರಿ ಇತಿಹಾಸವನ್ನು ತೆಗೆದುಕೊಂಡು ನೋಡಿದಂತಹ ಸಂದರ್ಭದಲ್ಲಿ ಸೂಕ್ಷ್ಮವಾಗಿ ಅದನ್ನು ವಿಚಾರ ಮಾಡುವುದಾದರೆ ನಮ್ಮ ಕರ್ನಾಟಕದಲ್ಲಿ ಹುಟ್ಟಿ ಹರಿಯತಕ್ಕಂತಹ ಕಾವೇರಿ ನೀರಿನ ಮೇಲೆ ನಮ್ಮಲ್ಲಿ ಹತೋಟಿ ಇಲ್ಲ. ಇವತ್ತು ಕರ್ನಾಟಕದಲ್ಲಿ ಯಾವುದಾದರೂ ಒಂದು ಯೋಜನೆಯನ್ನು ಕಾವೇರಿ ನದಿಗೆ ಅಡ್ಡವಾಗಿ ಕಟ್ಟಬೇಕೆಂದು ಪ್ರಯತ್ನಪಟ್ಟರೆ

ತಮಿಳುನಾಡಿನವರ ಒಪ್ಪಿಗೆಯನ್ನು ಪಡೆದು ನಾವು ಮಾಡಬೇಕಾದಂತಹ ಸಂದರ್ಭ ಬಂದಿದೆ. ಅಂದರೆ ಇದಕ್ಕೆ ಕಾರಣರು ಯಾರು ಎಂದರೆ ನಾವೆಲ್ಲರೂ ಕಾರಣರೇ.

ನಮಗೆ ಲಭ್ಯ ಇರತಕ್ಕಂತಹ ನೀರನ್ನು ಉಪಯೋಗಿಸತಕ್ಕಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಹಿಂದಿನಿಂದ ಮಾಡದೇ ಇರುವುದು ಕಾರಣವೆಂದು ಹೇಳಿದರೆ ತಪ್ಪಾಗಲಾರದು. 1913ರಲ್ಲಿ ಕನ್ನಂಬಾಡಿಯನ್ನು ಕಟ್ಟಬೇಕೆಂದು ಪ್ರಾರಂಭ ಮಾಡಿ ಅದನ್ನು ಮುಗಿಸುವುದಕ್ಕೆ 20 ವರ್ಷಗಳ ನಂತರ 1933ನೇ ಇಸವಿಯಲ್ಲಿ ಅದು ಪ್ರಾರಂಭವಾಯಿತು. 1993ರಿಂದ ಇಲ್ಲಿಯವರಿಗೆ ನಾವು ಅಂದು ಉಪಯೋಗಿಸುತ್ತಿರತಕ್ಕಂಥಾದ್ದು ಎಷ್ಟು ಕೇವಲ ಒಂದು ಲಕ್ಷ ಎಕರೆಗೆ ಮಾತ್ರ ನೀರಾವರಿಯಾಗುತ್ತಿತ್ತು. ಇವತ್ತು ನಾವು ಉಪಯೋಗಿಸುತ್ತಿರತಕ್ಕಂತಹ ಪ್ರಮಾಣ ಕೇವಲ ಹನ್ನೊಂದೂವರೆ ಲಕ್ಷ ಎಕರೆಯಾಗಿದೆ. ತಮಿಳುನಾಡಿನವರು 37 ಲಕ್ಷಕ್ಕೂ ಹೆಚ್ಚು ಎಕರೆಗಳಿಗೆ ನೀರಾವರಿ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ, ಅನುಭವಿಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ಕಾರಣರಾಗಿರತಕ್ಕಂತಹವರು ನಾವೇ. ನಾವು ಯಾವ ಕಾಲದಲ್ಲೂ ಕೂಡಾ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ಅಂಥಾ ಒಂದು ತಪ್ಪು ಈಗ ಆಗಬಾರದು ಎನ್ನುವ ದೃಷ್ಟಿಯಿಂದ ಹೇಳುತ್ತಿರತಕ್ಕಂಥಾದ್ದು ನಾವು ನಮ್ಮ ನಿಗದಿಯ ಪ್ರಕಾರ 2000 ವರ್ಷದೊಳಗೆ ನೀರನ್ನು ಉಪಯೋಗಿಸುವ ಕೆಲಸಗಳನ್ನು ನಾವು ಮಾಡಬೇಕಾಗಿದೆ. ನಾವು ಉಪಯೋಗಿಸುತ್ತಿರುವುದು ಎಷ್ಟು? ನಮ್ಮ ಹಾಗೆ ಆಂಧ್ರ, ಮಹಾರಾಷ್ಟ್ರ ರಾಜ್ಯಗಳಿಗೂ ಕೂಡ ತನ್ನದೇ ಆದಂತಹ ನೀರಿನ ಪಾಲು ಇದೆ. ಆದರೆ ಕರ್ನಾಟಕ ಏಕೀಕರಣವಾದ ಮೇಲೆ ಅನೇಕ ಜಿಲ್ಲೆಗಳು ಸೇರ್ಪಡೆಯಾದ ಮೇಲೆ ನಮಗೆ ಹೊಸದಾಗಿ ಇರತಕ್ಕಂಥಾದ್ದು ಮತ್ತು ಮೂಲವಾಗಿ ಅವರು ಬೇರೆ ರಾಜ್ಯದಿಂದ ಬರುವಂತಹ ಸಂದರ್ಭದಲ್ಲಿ ಯಾವ ಯೋಜನೆಗಳನ್ನು ಯಾವ ರಾಜ್ಯ ಸರಕಾರದವರೂ ಮಾಡಿರಲಿಲ್ಲ.

ಈಗ ನಾವು ಮಾಡಬೇಕಾಗಿರುವ ಸಂದರ್ಭ ಬಂದಿದೆ. ಒಂದು ಉದಾಹರಣೆ ಹೇಳುತ್ತೇನೆ. ಆಂಧ್ರಪ್ರದೇಶದಲ್ಲಿ ಬಜಾವತ್ ತೀರ್ಪನ್ನು ಕೊಡುವಂತಹ ಸಂದರ್ಭದಲ್ಲಿ ಅವರ 560 ಟಿ.ಎಂ.ಸಿ. ನೀರಿನ ಪಾಲೇನು ಇತ್ತು ಅದನ್ನು ಸಂಪೂರ್ಣವಾಗಿ ಬಳಕೆಯಾಗಿರತಕ್ಕಂಥಾದ್ದು ಇದೆ. ಆದರೆ ಕರ್ನಾಟಕ, ಮಹಾರಾಷ್ಟ್ರದಲ್ಲಿ ಆ ಪರಿಸ್ಥಿತಿ ಇರಲಿಲ್ಲ. ಇವತ್ತು ನಾವು ನಮ್ಮ ಹಕ್ಕು ಇರತಕ್ಕಂತಹ 752 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬೇಕಾದರೆ ನಮ್ಮದೇ ಆದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಇನ್ನೊಂದು ಕಡೆ ಈಗ ನಾವು ಬಳಕೆ ಮಾಡಿರತಕ್ಕಂಥಾದ್ದು ಎಷ್ಟು ಎಂದರೆ ಇಲ್ಲಿಯವರೆಗೆ 480 ರಿಂದ 500 ಟಿ.ಎಂ.ಸಿ. ನೀರನ್ನು ಮಾತ್ರ ಬಳಕೆ ಮಾಡುತ್ತಿದ್ದೇವೆ. ನಾವು ಈಗಾಗಲೇ ನಮ್ಮ ವಿವಿಧ ಯೋಜನೆಗಳ ಮುಖೇನ ಅದು ಸಣ್ಣ ನೀರಾವರಿಯಾಗಿರಬಹುದು, ಭಾರಿ ನೀರಾವರಿ ಯೋಜನೆಯಾಗಿರಬಹುದು ಅದು ಯಾವುದೇ ಯೋಜನೆ ಮುಖೇನ 260 ಕ್ಕೂ ಹೆಚ್ಚು ಟಿ.ಎಂ.ಸಿ. ನೀರಿನ ಬಳಕೆಯನ್ನು ನಾವು ಮಾಡಬೇಕಾಗಿತ್ತು. 260 ಟಿ.ಎಂ.ಸಿ.ಯನ್ನು ಬಳಕೆ ಮಾಡಬೇಕಾದರೆ ನಮಗೆ ಇರತಕ್ಕಂತಹ ಕೊರತೆ, ತೊಂದರೆ ಏನು ಎನ್ನುವುದು ಒಂದು ಕಡೆ. ಇನ್ನೊಂದು ಕಡೆ ಸ್ಕೀಮ್ (ಬಿ) ಎನ್ನುವುದು ಪ್ರಾರಂಭವಾಗತಕ್ಕಂಥಾದ್ದು ಇದೆ. 4 ವರ್ಷಗಳ ನಂತರ ಪ್ರಾರಂಭವಾಗತಕ್ಕಂತಹ ಒಂದು ಯೋಜನೆಯಲ್ಲಿ ಕರ್ನಾಟಕಕ್ಕೆ ಬರತಕ್ಕಂತಹ ನೀರಿನ ಲಭ್ಯ ಎಷ್ಟು ಇವತ್ತು ನಾವು ತೆಗೆದುಕೊಂಡಿರತಕ್ಕಂತಹ 75 ಪರ್ಸೆಂಟ್

ಡಿಪೆಂಡಬಿಲಿಟಿ ಮೇಲೆ 752 ಟಿ.ಎಂ.ಸಿ. ನೀರನ್ನು ನಾವು ಉಪಯೋಗಿಸಬೇಕಾಗಿದೆ. ಆದರೆ ಎರಡು ಸಾವಿರದ ವರ್ಷಗಳ ನಂತರ ಅಂದರೆ 4 ವರ್ಷಗಳ ನಂತರ ನಮಗೆ ಹೆಚ್ಚುವರಿ ನೀರು ಎಂದರೆ ಬಹುಶಃ ಈ 50 ಪರ್ಸೆಂಟ್ ಡಿಪೆಂಡಬಿಲಿಟಿ ತೆಗೆದುಕೊಂಡಂತಹ ಸಂದರ್ಭದಲ್ಲಿ 183 ಟಿ.ಎಂ.ಸಿ.ಗೂ ಹೆಚ್ಚು ನೀರನ್ನು ನಾವು ಉಪಯೋಗಿಸುವ ಜವಾಬ್ದಾರಿಕೆ ಇದೆ. ಈಗಾಗಲೇ ನಮ್ಮ ರಾಜ್ಯ ಸರಕಾರದವರು ಕೇಂದ್ರ ಸರಕಾರದ ನಿರ್ದೇಶನದ ಮೇಲೆ 80ರಲ್ಲಿ ಭಾರತ ದ್ವೀಪಗಳ ಕಲ್ಪನೆಯ ನದಿಗಳ ಒಂದು ಯೋಜನೆ ಎನ್ನುವ ಯೋಜನೆಯಡಿಯಲ್ಲಿ ಇವತ್ತು ಮಹಾನದಿ ಇರಬಹುದು, ಗೋದಾವರಿ, ಕೃಷ್ಣ ಇರಬಹುದು ಎಲ್ಲ ನದಿಗಳನ್ನು ಒಟ್ಟಿಗೆ ಸೇರಿಸಿ ಪ್ರವಾಹದಿಂದ ನದಿಗೆ ಸಮುದ್ರಕ್ಕೆ ಹೋಗತಕ್ಕಂತಹ ನೀರನ್ನು ತಡೆಗಟ್ಟಿ ಯೋಜನೆಗಳನ್ನು ಕೊಡಬೇಕೆಂದು ಈಗಾಗಲೇ ಕೇಂದ್ರ ಸರಕಾರದ ವಿವೇಚನೆಯಲ್ಲಿ ಇರುವಂತಹ ಸಂದರ್ಭದಲ್ಲಿ ಆದರೂ ನಮಗೆ ನೀರು ಬರಬೇಕಾಗಿರುವುದು ಎಷ್ಟು ಎಂದರೆ ಬಹುಶಃ 450 ಕ್ಕೂ ಹೆಚ್ಚು ಟಿ.ಎಂ.ಸಿ. ನೀರು ನಮಗೆ ಬರುತ್ತದೆ.

12.30 ಪಿ.ಎಂ.

ಅಂದರೆ ಆ ದಿಸೆಯಲ್ಲಿ ನಮ್ಮ ಮುಂದೆ ಇರುವ ಜವಾಬ್ದಾರಿಕೆ ಏನೆಂದರೆ, ಒಂದು ಕಡೆ ನಾಲ್ಕು ವರ್ಷಗಳಲ್ಲಿ ಮುಗಿಯತಕ್ಕಂಥ ನೀರನ್ನು ಸಂಪೂರ್ಣವಾಗಿ ಉಪಯೋಗಿಸುವುದಕ್ಕಾಗುತ್ತಿಲ್ಲ. ನಾಲ್ಕು ವರ್ಷಗಳ ನಂತರ ಇವತ್ತು ಎಲ್ಲಾ ರೀತಿಯಲ್ಲೂ ಕೂಡ ಬರತಕ್ಕಂಥದ್ದು. ಈಗಾಗಲೇ ನಮಗೊಂದು by an Act of Parliament we have to create an authority. ಹೀಗಿರುವಾಗ ಆಂಧ್ರಪ್ರದೇಶದವರೇ ಒತ್ತಾಯ ಮಾಡುತ್ತಿರುವ ಉದ್ದೇಶವೇನು? ಈಗ ಅವರು ಕಾಲು ಕೆರೆದು ನಮ್ಮ ಮೇಲೆ ಜಗಳ ಮಾಡುವ ಉದ್ದೇಶವೇನು? ಅವರು ಈಗ ಕಾಲು ಕೆರೆದು ಕೋರ್ಟಿಗೆ ಹಾಕುವುದು ಏನಿದೆ? ಕೃಷ್ಣಾವ್ಯಾಲಿ ಅಥಾರಿಟಿಯನ್ನು ಕ್ರಿಯೇಟ್ ಮಾಡಿ ಎಂದು ಹೈಕೋರ್ಟ್‌ನವರು ನಮಗೆ ನಿರ್ದೇಶನ ಕೊಡುತ್ತಾರೆ. ಇದು ಆಗುವುದು ಯಾವಾಗ? ನಾಲ್ಕು ವರ್ಷಗಳ ನಂತರ ಆಗುವುದಕ್ಕೆ ಇವತ್ತೇ ಮಾಡಿ ಎನ್ನುವ ಒಂದು ನಿರ್ದೇಶನವನ್ನು ಇವತ್ತು ಪ್ರಾರಂಭ ಮಾಡಿದ್ದಾರೆ. ಅವರಿಗೆ ರಾಜಕೀಯವಾಗಿ ಎಲ್ಲ ರೀತಿಯಲ್ಲೂ ಕೂಡ ಒಂದು ಭಾವನೆ ಬಂದಿದೆ. ಏನೆಂದರೆ, ಯಾವುದೇ ಸಂದರ್ಭದಲ್ಲೂ ಕೂಡ ಕರ್ನಾಟಕದವರಿಗೆ ತನ್ನ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವ ಶಕ್ತಿ ಇಲ್ಲ, ಇವತ್ತು ನಾವು ಅದನ್ನು ಉಪಯೋಗಿಸಿಕೊಳ್ಳಲೇಬೇಕು ಎನ್ನುವ ದೃಷ್ಟಿಯಿಂದ ಈ ಎಲ್ಲ ತೆರವಾದ ಅಡೆತಡೆಗಳನ್ನು ತರುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ.

ಅದಕ್ಕೆ ಯಾವ ರೀತಿಯಾಗಿಯೂ ಕೂಡ ಅವರ ಕಡೆಯಿಂದ ಎಷ್ಟೇ ವಿರೋಧಗಳು ಬರಲಿ, ಪ್ರತಿರೋಧಗಳು ಬರಲಿ, ಏನೇ ಬಂದರೂ ಕೂಡ ಅದಕ್ಕೆ ವಿರೋಧವಾಗಿಯೇ ನಿಂತು ಕೆಲಸವನ್ನು ಮಾಡುವುದರ ಬಗ್ಗೆ ನಾವು ಮುಂದಾಗಬೇಕೆಂದು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದು ಯಾವ ರೀತಿಯಾಗಿ ಬಳಕೆಯಾಗಬೇಕು? ಇವತ್ತು ಸಂಪನ್ಮೂಲದ ಕೊರತೆ ಒಂದು ಕಡೆ. ಇನ್ನೊಂದು ಕಡೆ ಯೋಜನೆಗಳ ಮುಖೇನ ನಾವು ನಮ್ಮ ನೀರಿನ ಬಳಕೆಯ ಬಗ್ಗೆ ನಮ್ಮ ಹಕ್ಕನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗಾಗಲೇ 247 ಟಿಎಂಸಿಯಲ್ಲಿ 60 ಟಿಎಂಸಿ ನೀರನ್ನು ಉಪಯೋಗಿಸಿಬೇಕಾಗಿರುವುದಕ್ಕೆ ಅನೇಕ ರೀತಿಯಾದ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ, ಅವುಗಳಲ್ಲಿ ಕೆಲವು ವಿವಿಧ ಹಂತಗಳಲ್ಲಿವೆ. ಕೆಲವು ಪ್ರಾರಂಭವಾಗಿದೆ

ಕೆಲವು ಪ್ರಾರಂಭವಾಗಬೇಕಾಗಿದೆ. ಕೇಂದ್ರ ಸರ್ಕಾರದ ಮಂಜೂರಾತಿಗೆ ಹೋಗಿದೆ, ಒಪ್ಪಿಗೆಯಾಗಿದೆ, ಬಂದಿಲ್ಲ ಇವೆಲ್ಲಾ ಇದ್ದೇ ಇರುವಂಥದ್ದು. ನಾನು ಸರ್ಕಾರಕ್ಕೆ ತಮ್ಮ ಮುಖೇನ ಇವತ್ತು ಒಂದು ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಆಂಧ್ರದವರು ಯಾವ ರೀತಿಯಾಗಿ ಎಚ್ಚರಿಕೆಯನ್ನು ತೆಗೆದುಕೊಂಡಿದ್ದಾರೋ ಅದೇ ರೀತಿಯಾಗಿ ನಮ್ಮ ಪ್ರತಿಯೊಂದು ಯೋಜನೆಗಳಿಗೂ ಕೂಡ ಕೇಂದ್ರ ಸರ್ಕಾರದ ಮಟ್ಟದಲ್ಲಿ ಆಗುವಂಥ ವಿಳಂಬಕ್ಕೆ ನೀವು ಪ್ರತಿಭಟನೆಯನ್ನು ಇವತ್ತಿನಿಂದಲೇ ಸಲ್ಲಿಸಬೇಕಾಗುತ್ತದೆ.

ಇವತ್ತಿನಿಂದಲೇ ಪ್ರತಿಭಟನೆಯನ್ನು ಹಂತ ಹಂತವಾಗಿ ಕೂಡ ಅದರ ರಿಜಿಸ್ಟರ್ ಮಾಡಿಕೊಂಡು ಬರಬೇಕಾಗುತ್ತದೆ. ಏಕೆಂದರೆ ನಾಳೆ ನಾಲ್ಕು ವರ್ಷಗಳ ನಂತರ this use of water is subjected to a review. ಅಂಥ ಸಂದರ್ಭದಲ್ಲಿ ನಾವು ಅಥಾರಿಟಿ ಮುಂದೆ ಅದನ್ನು ಪ್ರತಿಪಾದನೆ ಮಾಡಬಹುದು, ನಮ್ಮ ಹಕ್ಕು ಇತ್ತು, ನಮಗೆ ತೊಂದರೆಯಾಯಿತು, ನಮ್ಮ ಸಂಪನ್ಮೂಲದ ಪ್ರಶ್ನೆ ಇತ್ತು ಎಂದು ಇವೆಲ್ಲಾ ವಾದ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಯಾವತ್ತು ಕೂಡ ಪ್ರತಿಹಂತದಲ್ಲೂ ಕೂಡ ಕೇಂದ್ರ ಸರ್ಕಾರದಲ್ಲಿ ನಿಕಟವಾದ ಸಂಪರ್ಕವನ್ನು ವ್ಯವಹಾರವನ್ನು ಇಟ್ಟುಕೊಂಡು ಹಂತ ಹರಿತವಾಗಿ ಕೂಡ ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ವಿಳಂಬ ಆಗದೇ ಇರುವ ಬಗ್ಗೆ ಮಾಹಿತಿಯನ್ನು ಕೊಡುವುದು ಸೂಕ್ತ ಎಂದು ನಾನಾದರೂ ಕೂಡ ಭಾವನೆ ಮಾಡುತ್ತೇನೆ. ಮತ್ತೊಂದು ಬಹಳ ಮುಖ್ಯವಾದ ವಿಷಯ ಏನೆಂದರೆ ನಾಲ್ಕು ವರ್ಷಗಳ ನಂತರ ದೊರೆಯಬೇಕಾಗಿರುವ ನೀರು ಮತ್ತು ಅದರೊಳಗೆ ಉಪಯೋಗಿಸಬೇಕಾದ ನೀರಿನಲ್ಲಿ ನನ್ನ ವೈಯಕ್ತಿಕವಾಗಿ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಒಂದು ಯೋಜನೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಭದ್ರ ಮೇಲ್ದಂಡೆ ಯೋಜನೆ ಎನ್ನುವುದು ಇದೆ.

ಆ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಹೇಳಿ ಬಚಾವತ್ ತೀರ್ಪಿನಲ್ಲಿ ಅವತ್ತು ಮುಂದೆ ಹೋದಂಥ ಸಂದರ್ಭದಲ್ಲಿ ಅಂದಿನ ಜಡ್ಜ್‌ಸ್ ಕೂಡ ಒಂದು ತೀರ್ಪನ್ನು ಕೊಡುವ ಸಂದರ್ಭದಲ್ಲಿ ತುಮಕೂರು, ಚಿತ್ರದುರ್ಗ, ಕೋಲಾರ, ಬಳ್ಳಾರಿ ಭಾಗದಲ್ಲಿ ಕ್ಷಾಮಪೀಡಿತ ಪ್ರದೇಶಗಳ ಈ ಭಾಗಕ್ಕೆ ಈ ಯೋಜನೆಯನ್ನು ಮಾಡುವುದು ಸೂಕ್ತ ಎನ್ನುವ ಭಾವನೆಯನ್ನು ಕೂಡ ಇಟ್ಟಿದ್ದಾರೆ. ಸರ್ಕಾರದವರು ಅಂದು ಕೊಟ್ಟಂಥ ಸಲಹೆಗಳನ್ನು ಅವರು ಸಂಪೂರ್ಣವಾಗಿ ಒಪ್ಪದೆ ಇವತ್ತು ಟೆಂಪೊರರಿಯಾಗಿ ಅಲಾಟ್‌ಮೆಂಟ್‌ನ್ನು ಮಾಡಿದ್ದಾರೆ. ಅದು ಏನೆಂದರೆ ತುಂಗಭದ್ರಾ ಉಪಕಣಿವೆ ಸಬ್ ಬೇಸಿನಲ್ಲಿ ಬರುವುದರಲ್ಲಿ ಭದ್ರಾ ಬಲದಂಡೆ ನಾಲೆಗೆ ತಾತ್ವಿಕವಾಗಿ ಮಂಜೂರಾತಿಯನ್ನು ಕೊಟ್ಟು ಅದಕ್ಕೆ ಟೆಂಪೊರರಿಯಾಗಿ 10 ಟಿಎಂಸಿ ನೀರನ್ನು ಕೂಡ ಅಲಾಟ್ ಮಾಡಿದ್ದಾರೆ. ಇವತ್ತು ಹತ್ತು ಟಿಎಂಸಿ ನೀರು ಇಡಬೇಕಾಗುತ್ತದೆ. ಇದಾದನಂತರ ಒಂದೇ ಒಂದು ವಿಷಯವನ್ನು ನಾನು ತಮಗೆ ಜಡ್ಜಸ್‌ರವರು ರಿಪೋರ್ಟಿನಲ್ಲಿ ಅಳವಡಿಸಿರುವ ಒಂದು ಮಾತನ್ನು ಹೇಳಿದರೆ ಬಹುಶಃ ಅರ್ಥವಾಗುತ್ತದೆ. ಏಕೆಂದರೆ ನಮ್ಮ ಅಧಿಕಾರಿಗಳು ಯಾವುದೇ ಒಂದು ಬಚಾವತ್ ತೀರ್ಪಿನ ಬಗ್ಗೆ ಇವತ್ತು ಸಾಕಷ್ಟು ಚರ್ಚೆ ಮಾಡುತ್ತಾರೆ. ಆದರೆ ಆ ತೀರ್ಪಿನನ್ವಯ ನಾವು ಏನು ಕಾರ್ಯಕ್ರಮ ಹಾಕಬೇಕೆನ್ನುವುದರ ಬಗ್ಗೆ ಇವತ್ತಿನವರೆಗೂ ನಾವು ಗಮನಹರಿಸಿಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ.

"The Karnataka areas in the said sub basin and is inconsistant with the findings of the Tribunal that drought and scarcity conditions have frequently occured in extensive areas in the Districts of Dharwad, Bellary, Chitradurga and Tumkur. Like wise ceiling of 42 TMC on use of water from the vedavathi sub basin has resulted in denial of water to drought affected areas in that sub basin. It has submitted very necessary for the State of Karnataka to provide irrigation facilities, at least in the following drought prone areas."

ಇನ್ನೊಂದು ಕಡೆ ಕೂಡ ಅದನ್ನೇ ಹೇಳುತ್ತಾರೆ. "The Upper Bhadra project is conceived in the project, requires 36 TMC of water to provide irrigation facility to drought affected areas of Chitradurga, Bellary, Tumkur and worst affected areas of Tungabhadra basin. A dam to be constructed at Mahagundi, the catchment areas of Bhadra be proposed to be ..." so and so ಎನ್ನುವಂಥ ಮಾತನ್ನು ಹೇಳುತ್ತಾರೆ. ಈಗಾಗಲೇ ಅವರು ತೀರ್ಮಾನ ಮಾಡಿರುವ ಪ್ರಕಾರ 36 ಟಿಎಂಸಿ ಆಫ್ ವಾಟರ್ ಇವತ್ತು ಅವೈಲಬಿಲಿಟಿ ಇದೆ, ಅದನ್ನು ಉಪಯೋಗಿಸಿಕೊಳ್ಳಿ ಎಂದು ಹೇಳಿ. ಇವತ್ತು ಅಧಿಕಾರಿಗಳು ಕೇಂದ್ರ ಸರ್ಕಾರಕ್ಕ ಕೆಲವು ಮಾಹಿತಿಗಳನ್ನು ಕಳುಹಿಸಿದ್ದಾರೆ. ನಾನು ಖುದ್ದಾಗಿ ಅದನ್ನು ನೋಡಿದ್ದೇನೆ. ಅವರು ಏನು ಹೇಳುತ್ತಾರೆ ಎಂದರೆ, ಇವತ್ತು 320 ಟಿಎಂಸಿಯನ್ನು ತುಂಗಭದ್ರ ಬೇಸಿನ್‌ನಲ್ಲಿರುವುದಕ್ಕಿಂತ ಮೀರುವುದಕ್ಕಾಗುವುದಿಲ್ಲ ನಮ್ಮ ಬಳಕೆ, ಅದಕ್ಕೋಸ್ಕರ ನಮ್ಮಲ್ಲಿ ನೀರೇ ಇಲ್ಲ ಎನ್ನುವ ಒಂದು ವಾದವವನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಅದಕ್ಕೆ ನಾನು ವಿರೋಧ ಇದ್ದೇನೆ. ಅದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ.

ಇವತ್ತು ಬಚಾವತ್ ತೀರ್ಪಿನನ್ವಯ ನಮಗೆ ಹತ್ತು ಟಿಎಂಸಿ ನೀರು ಇದ್ದೇ ಇದೆ. ಎರಡು ಸಾವಿರ ಇಸವಿಯವರೆಗೂ ಅಲಾಟ್‌ಮೆಂಟ್‌ನಲ್ಲಿ ಹತ್ತು ಟಿಎಂಸಿ ಅಪ್ಪರ್ ಭದ್ರಾಗೆ ಇದ್ದೇ ಇದೆ. ಅದರ ನಂತರ ಹತ್ತು ಟಿಎಂಸಿ ನೀರು ಅಲ್ಲದೆಯೇ ತುಂಗಭದ್ರಾ ಸಬ್ ಬೇಸಿನಲ್ಲಿ ಈಗಾಗಲೇ 82 ಟಿಎಂಸಿ ಹೆಚ್ಚಿನ ನೀರು ಇರುವ ಸಂದರ್ಭದಲ್ಲಿ ಈಗ ಅದರ ಬಳಕೆಯಾಗುವುದು ಕೇವಲ 60 ಟಿಎಂಸಿ ವಾಟರ್. ಹಾಗಾದರೆ ನಮಗೆ 20 ಟಿಎಂಸಿ ಹೆಚ್ಚು ನೀರಿನ ಲಭ್ಯ ಇದೆ. ಇದರ ಜೊತೆಗೆ ನಮ್ಮ ತುಂಗಭದ್ರಾ ಅಣೆಕಟ್ಟು ಏನಾಗಿದೆ ಎಂದರೆ ಇವತ್ತು ಸಿಲ್ಟಪ್ ಆಗಿದೆ. ನಾವೆಲ್ಲರೂ ಕೂಡ ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಚರ್ಚೆ ಮಾಡಿದ್ದೇವೆ ಅದರ ಬಗ್ಗೆ ವಿಚಾರವನ್ನೂ ಕೂಡ ಮಾಡಿದ್ದೇವೆ. 20 ಟಿಎಂಸಿಗಿಂತ ಹೆಚ್ಚು ನೀರಿನ ಶೇಖರಣೆಯಾಗುವ ಒಂದು ಭಾಗ ಈಗಾಗಲೇ ಸಿಲ್ಟಪ್ ಆಗಿದೆ. ಇವತ್ತು ಅಲ್ಲಿಗೆ ಒಂದು ತಜ್ಞರ ಸಮಿತಿ ಹೋಗಿ ವರದಿಯನ್ನು ಕೂಡ ಕೊಟ್ಟಿದ್ದಾರೆ. ನಿನ್ನೆ ಕೊಟ್ಟಿರುವ ವರದಿ ಪ್ರಕಾರ 23 ಟಿಎಂಸಿ ನೀರನ್ನು ಕಡಿಮೆ ಸ್ಟೋರ್ ಮಾಡುತ್ತಾ ಇದ್ದಾರೆ. ನಾನು ಕೇಳುತ್ತೇನೆ, ಅಲ್ಲಿ ಬಳಕೆಯಾಗದೇ ಇರುವ ನೀರಿನ ಪ್ರಮಾಣವನ್ನು ಇಲ್ಲಿ ನಾವು ಕೊಡುವುದಾದರೆ ಎಲ್ಲಾ ಸಂದರ್ಭದಲ್ಲೂ ಕೂಡ ಇಲ್ಲಿ ನಿಮಗೆ ಸಿಗುವುದು 20 ಟಿಎಂಸಿ ನೀರು. ಅಲ್ಲಿ ಭದ್ರಾದಲ್ಲಿ ಬಳಕೆಯಾಗದೇ ಇರುವುದು ಹತ್ತು, ಇವರಲ್ಲಿ 20 ಟಿಎಂಸಿ, ಒಟ್ಟು 50 ಟಿಎಂಸಿ ಹೆಚ್ಚಿನ ನೀರು ಉಳಿಕೆಯಾಗುತ್ತಾ ಇದೆ. ಇಷ್ಟಿದ್ದರೂ ಕೂಡ ಅವರು ಕೇಂದ್ರಸರ್ಕಾರಕ್ಕೆ ವರದಿಯನ್ನು ಕೊಡುತ್ತಾರೆ. ಬಳಕೆ ಮಾಡುವುದಕ್ಕೆ ಅವಕಾಶವಿಲ್ಲ, 320 ಟಿಎಂಸಿ ನೀರನ್ನು ಎಂಬಾರ್ಗೋ ಇರುವುದರಿಂದ ಮಾಡುವುದಕ್ಕಾಗುವುದಿಲ್ಲ

ಮತ್ತು ವೇದಾವತಿ ಬೇಸಿನ್‌ನಲ್ಲಿ 42 ಟಿಎಂಸಿಯನ್ನು ಮೀರುವ ಹಾಗೆ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ಪದೇ ಪದೇ ಕೇಳುತ್ತಿದ್ದೇನೆ. ದಯಮಾಡಿ ನಾನು ಹೇಳುತ್ತೇನೆ, ಇಂಥ ಒಂದು ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ಇವತ್ತು ನೀರಿನ ಬಗ್ಗೆ ರಿಸರ್ವ್ ಮಾಡಬೇಕಾಗುತ್ತದೆ. ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇವತ್ತು ಈ ಮನೆಯ ಸದಸ್ಯರಾಗಿದ್ದವರು ಈ ರಾಷ್ಟ್ರದ ಪ್ರಧಾನಿಯಾಗಿರುವ ಸಂದರ್ಭದಲ್ಲಿ ಅವರು ಚಿತ್ರದುರ್ಗಕ್ಕೆ ಬಂದಂಥ ಸಂದರ್ಭದಲ್ಲಿ ಅದು ಯಾವುದೇ ಸಂದರ್ಭದಲ್ಲಿ ಬಂದಿರಲಿ, ಹಾಗೆ ಬಂದಂಥ ಸಂದರ್ಭದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯನ್ನು ನಾನು ಕಾರ್ಯಗತ ಮಾಡುತ್ತೇನೆ ಎನ್ನುವ ಮಾತನ್ನು ಎಲ್ಲರಿಗೂ ಕೂಡ ಹೇಳಿದ್ದಾರೆ. ನಮ್ಮ ಭಾಗದ ರಾಜಕೀಯ ಮುತ್ಸದ್ದಿಗಳಾಗಿರತಕ್ಕಂಥ ನಿಜಲಿಂಗಪ್ಪನವರ ಮನೆಗೆ ಹೋಗಿ ಇದನ್ನು ನಾನು ಕಾರ್ಯಗತ ಮಾಡುತ್ತೇನೆ ಎನ್ನುವ ಮಾತನ್ನು ಅನೇಕ ಸಂದರ್ಭದಲ್ಲಿ ಹೇಳಿದ್ದಾರೆ. ಅದರ ಜೊತೆಗೆ ಅವರು ಅಷ್ಟಕ್ಕೇ ಸುಮ್ಮನಿರಲಿಲ್ಲ. ಇವತ್ತು ಕಾರ್ಯಗತ ಮಾಡುವುದರ ಬಗ್ಗೆ ನಮ್ಮ ರಾಜ್ಯಸರ್ಕಾರಕ್ಕೆ ನಿರ್ದೇಶನವನ್ನೂ ಕೂಡ ಬಹುಶಃ ಕೊಟ್ಟಿದ್ದಾರೆ ಎಂದು ನಾನು ಭಾವನೆ ಮಾಡುತ್ತೇನೆ. ನೀರಾವರಿ ಸಚಿವರಾಗಿರುವ ನಾಗೇಗೌಡರು ಎರಡು ಸುತ್ತಿನ ಮಾತುಕತೆಯನ್ನು ನಮ್ಮ ಜಿಲ್ಲೆಯ ಅನೇಕ ಶಾಸಕರುಗಳನ್ನು ಕರೆದು ಚರ್ಚೆಮಾಡಿದ್ದಾರೆ.

ಚರ್ಚೆ ಮಾಡುವಂಥ ಸಂದರ್ಭದಲ್ಲಿ ಟೆಕ್ನಿಕಲ್ ಅಡ್ವೈಸ್ ಕಮಿಟಿ ಕೂಡ ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ ಕೇಂದ್ರ ಸರ್ಕಾರಕ್ಕೆ ಅದನ್ನು ಕೊಡುವಂಥ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ಹೇಳುತ್ತೇನೆ, ಇವತ್ತು ಬಚಾವತ್ ತೀರ್ಪಿನಲ್ಲಿ ಬಂದಿರುವಂಥದ್ದು "It cannot be said that the demand for this project is not worth consideration but unless a further study is made, the water available in Tunga Bhadra, the project may be deferred".

ಎನ್ನುವ ಮಾತನ್ನು ಹೇಳುತ್ತಾರೆ. 20-25 ವರ್ಷಗಳಾದರೂ ಕೂಡ ಇನ್ನೂವರೆಗೂ ಕೇಂದ್ರ ಸರ್ಕಾರಕ್ಕೆ ಯಾವುದೇ ರೀತಿಯಾದ ಸರ್ವೆ ಮಾಡಿ ಒಂದು ವರದಿಯನ್ನು ಕೊಡಲಿಲ್ಲ. ವರದಿಗಳನ್ನು ಕೊಟ್ಟರು? ಯಾವ ರೀತಿಯಾಗಿ ಕೊಟ್ಟರು? ಈ ರೀತಿಯಾಗಿ ಕೊಟ್ಟರು. ಯಾವುದೇ ಪ್ರಾಜೆಕ್ಟ್ ಮಾಡುವುದಕ್ಕಾಗುವುದಿಲ್ಲ, ಎಲ್ಲ topo-sheet ಸ್ಟಡಿ ಮೇಲೆ ಇವತ್ತು ವರದಿಯನ್ನು ಕೊಟ್ಟು ಭದ್ರಾಮೇಲ್ದಂಡೆ ಆಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ವಾದವನ್ನು ಇಟ್ಟಿರುವುದು ತಪ್ಪು. ಅದನ್ನು ಮಾಡಬಹುದು ಎಂದು ಈಗಾಗಲೇ ಒಂದು ಹೊಸ ಚಿಂತನೆ ಪ್ರಾರಂಭವಾಗಿದೆ. ಯಾವ ರೀತಿಯಾಗಿ ಮಾಡಬಹುದು ಎಂದರೆ, ಈಗಾಗಲೇ ತುಂಗಾದಲ್ಲಿ ಬರುವ ನೀರನ್ನು ಭದ್ರಾಕ್ಕೆ ಲಿಫ್ಟ್ ಮಾಡಿ ಈಗ ಇರುವ ಚಾನಲ್‌ನ್ನೇ ಉಪಯೋಗಿಸಿಕೊಂಡು ಚಿತ್ರದುರ್ಗ ಮತ್ತು ವೇದಾವತಿ ನದಿಗಳಿಗೆ ನೀರನ್ನು ಹರಿಸತಕ್ಕಂಥದ್ದು, ಸುಮಾರು ಎರಡು ಲಕ್ಷ ಎಕರೆವರೆಗೂ ನೀರನ್ನು ಕೊಡಬಹುದು ಎನ್ನುವ ದೃಷ್ಟಿಯಿಂದ ಈಗಾಗಲೇ 30-32 ಟಿಎಂಸಿ ನೀರನ್ನು ಬಳಕೆ ಮಾಡಬಹುದು ಎನ್ನುವ ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನೀವು ಯಾವತ್ತೇ ಕೇಳಿದರೂ ಕೂಡ ನಾನು ಈ ವಾದವನ್ನು ಏಕೆ ಮಾಡುತ್ತಿದ್ದೇನೆ ಎಂದರೆ ನಿಮಗೆ ನೀರು ಲಭ್ಯ ಇದೆ. ನಿಮಗೆ ಸಾಕಷ್ಟು ನೀರು ಲಭ್ಯವಿದೆ.

ಇವತ್ತು ತುಂಗಭದ್ರಾ ಬೇಸಿನ್‌ನಲ್ಲಿ ನೀರು ಲಭ್ಯ ಇರತಕ್ಕದ್ದು ಒಂದು ಕಡೆ ಆದರೆ ಇವತ್ತು 50 ಪರ್ಸೆಂಟ್ ಡಿಪೆಂಡಬಲಿಟಿ ತೆಗೆದುಕೊಂಡಂತಹ ಸಂದರ್ಭದಲ್ಲಿ

ನಿಮಗೆ ಹೆಚ್ಚುವರಿ ನೀರು ಬರತಕ್ಕದ್ದು ಇನ್ನೊಂದು ಕಡೆ ಇರಬೇಕಾದರೆ, ಅದರ ಸಂಪೂರ್ಣ ಬಳಕೆಯ ಬಗ್ಗೆ ಈಗಲೇ ಕಾರ್ಯಕ್ರಮವನ್ನು ಹಾಕಬೇಕು. ದಯಮಾಡಿ ನಾನು ನೇರವಾಗಿ ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನನ್ನ ಕ್ಷೇತ್ರಕ್ಕೆ ಸೇರಿರತಕ್ಕಂತಹ ಶಿರಾ, ಮಧುಗಿರಿ, ಪಾವಗಡ ಅವುಗಳ ಪರಿಸ್ಥಿತಿ ಬಗ್ಗೆ ನಾನು ಒಂದೇ ಒಂದು ಮಾತನ್ನು ಹೇಳಬೇಕೆಂದರೆ ಇವತ್ತು ನನ್ನದೇ ಒಂದು ಹೊಲದಲ್ಲಿ ನನ್ನದೇ ಒಂದು ತೋಟದಲ್ಲಿ ಸುಮಾರು 800,900 ಅಡಿಗಳು ಬಹುಶಃ ನೀವು ಕರ್ನಾಟಕದಲ್ಲಿ ಎಲ್ಲೂ ಕೇಳಿಲ್ಲ. 800,850 ಅಡಿ ಆಳದವರೆಗೂ ಕೂಡ ಇವತ್ತು ಒಂದು ಬೋರ್‌ವೆಲ್ ತೋಡಿಸಬೇಕಾದರೆ ಸುಮಾರು ಒಂದೂವರೆಯಿಂದ ಎರಡು ಲಕ್ಷ ರೂಪಾಯಿ ಖರ್ಚು ಆಗುತ್ತದೆ.

ಅಂತಹ ಪರಿಸ್ಥಿತಿಗೆ ನಾವು ಹೋಗಿದ್ದೇವೆ. ಇವತ್ತು ನಮಗೆ ಎಲ್ಲಿ ನೋಡಿದರೂ ಕುಡಿಯುವ ನೀರಿನ ಸಮಸ್ಯೆ ಇದೆ. ಬಹುಶಃ ನಮ್ಮ ಎಂ.ಪಿ. ಪ್ರಕಾಶ್ ಅವರಿಗೆ ಗೊತ್ತಿರತಕ್ಕದ್ದು, ನಾವು ಯಾವುದೇ ಸಂದರ್ಭದಲ್ಲಿ ಹೋದರೂ ಕೂಡ ಕುಡಿಯುವ ನೀರಿನ ಬಗ್ಗೆ ವಾದ ಹೇಳುತ್ತಿರುತ್ತಾರೆ. ಅವರಿಗೆ ಬೇಸರ ಆಗಿ ಹೋಗಿದೆ. ಏನು ಅಂದರೆ ಯಾವಾಗ ಬಂದರೂ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡುತ್ತಾ ಇರುತ್ತಾರೆಂದು ಏಕೆಂದರೆ ನಮ್ಮ ಪರಿಸ್ಥಿತಿ ಆ ರಿತಿ ಇದೆ. ನಮ್ಮ ಅಂತರ್ಜಲ ಸಂಪೂರ್ಣವಾಗಿ ನಶಿಸಿ ಹೋಗಿದೆ. ಬತ್ತಿ ಹೋಗಿದೆ. ಇವತ್ತು ಡ್ರಾಟ್ ಪ್ರೋನ್ ಏರಿಯಾ ಆಗಿರುವಂತಹ ಸಂದರ್ಭದಲ್ಲಿ ಇದಕ್ಕೆ ಒಂದು ಯೋಜನೆಯನ್ನು ನೀವು ಮಾಡಲೇಬೇಕಾಗುತ್ತದೆ. ಬಹುಶಃ ಈ ಯೋಜನೆ ಬಿಟ್ಟರೆ ಬೇರೆ ಇನ್ನೂ ಯಾವುದೇ ಯೋಜನೆಯಲ್ಲಿ ಕೂಡ ನೀವು ನೀರು ಕೊಡುವುದಕ್ಕೆ ಸಾಧ್ಯ ಇಲ್ಲ. ಆ ದೃಷ್ಟಿಯಿಂದ ನನ್ನ ಸಲಹೆ ಇಷ್ಟೆ. ಇವತ್ತು ನಿಮಗೆ ಮುಂದೆ ಬರತಕ್ಕ ನೀರನ್ನು ಅಂದರೆ ಸುಮಾರು 70 ರಿಂದ 75 ಟಿಎಂಸಿ ವಾಟರನ್ನು ಶೇಖರಣೆ ಮಾಡಿ ಅದಕ್ಕೆ ಒಂದು ಯೋಜನೆಯನ್ನು ರೂಪಿತ ಮಾಡಿ, ಅದನ್ನು ಯಾವತ್ತೇ ತೆಗೆದುಕೊಳ್ಳಿ. ನಾಲ್ಕು ವರ್ಷಗಳ ನಂತರ ತೆಗೆದುಕೊಂಡರೂ ಪರವಾಗಿಲ್ಲ.

ಏಕೆಂದರೆ ಅದಕ್ಕೆ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಸೆಂಟ್ರಲ್ ವಾಟರ್ ಕಮೀಷನ್‌ಗೆ ಹೋಗಬೇಕಾಗುತ್ತದೆ ಕೇಂದ್ರ ಸರ್ಕಾರ ಒಪ್ಪ ಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರೆ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯಲ್ಲಿ ಕೂಡ ಹೋಗ ಬೇಕಾಗಿರುತ್ತದೆ. ಇವೆಲ್ಲಾ ಸಂದರ್ಭ ಇರುವುದರಿಂದ ಇವತ್ತು 70 ರಿಂದ 75 ಟಿಎಂಸಿ ನೀರನ್ನು ಬಳಕೆ ಮಾಡತಕ್ಕಂಥ ಒಂದು ಯೋಜನೆಯನ್ನು ರೂಪಿಸಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಇನ್ನೊಂದು ವಿಚಾರ ಇದೆ. ಅನೇಕ ಸಾರಿ ಮಾತನಾಡುವಂತಹ ಸಂದರ್ಭದಲ್ಲಿ ಆ ಕಡೆಯವರು ಇರಬಹುದು, ಈ ಕಡೆಯವರು ಇರಬಹುದು. ಈ ಯೋಜನೆಗೆ ವಿರೋಧವಾಗಿಯೇ ಮಾತನಾಡಬಹುದು. ಅದನ್ನು ನಾನು ಊಹೆ ಮಾಡಿಯೇ ಇದಕ್ಕೆ ಉತ್ತರ ಈಗ ಕೊಡುತ್ತಿದ್ದೇನೆ. ಇವತ್ತು ಚಿಕ್ಕಮಗಳೂರಿನ ಅನೇಕ ಭಾಗಗಳಲ್ಲಿ ಕಾಫಿ ಎಸ್ಟೇಟ್‌ಗಳು ಮುಳುಗಿ ಹೋಗುತ್ತವೆ ಎನ್ನುವ ಭಾವನೆಯನ್ನು ಮಾಡಿದ್ದಾರೆ. ಇವತ್ತು ನಾನು ಹೇಳುತ್ತೇನೆ. ಇವತ್ತು ಅಲ್ಲಿ ಕಾಫಿ ಎಸ್ಟೇಟ್ ಮುಳುಗಿ ಹೋದರೆ, ಅಲ್ಲಿ ಪರಿಸರ ನಾಶ ಆದರೆ ನನಗೂ ಸಂಬಂಧಿಸಿದಂತೆ ನಾನು ಅದರ ಬಗ್ಗೆ ಮಾಗುಂಡಿ ಬಗ್ಗೆ ಹಿಂದೆ ಪ್ರಪೋಸಲ್ ಕೊಟ್ಟಿರತಕ್ಕ ಸಂದರ್ಭದಲ್ಲಿ ಇವತ್ತು ಅಲ್ಲಿ ಒಂದು ಅಣೆಕಟ್ಟನ್ನು ಕಟ್ಟಿ ಅಪ್ಪರ್ ಭದ್ರಾ ಯೋಜನೆ ಮಾಡುವುದರಿಂದ ಅಲ್ಲಿರತಕ್ಕ ಹೊರನಾಡು ಮುಳುಗಿ ಹೋಗಬಹುದು ಅಥವಾ ಕುದುರೆ ಮುಖ ಐರನ್ ಓರ್ಸ್ ಮುಳುಗಿ ಹೋಗಬಹುದು. ಅದಕ್ಕೋಸ್ಕರ

ನಾನು ಸಲಹೆ ಕೊಡುತ್ತೇನೆ. ಇವತ್ತು ಮಾಗುಂದಿಯಿಂದ ಹಿಡಿದು ಎನ್.ಆರ್. ಪುರಂ ಮಧ್ಯದಲ್ಲಿ ಒಂದು ನದಿ ನೀರನ್ನು ಡೈವರ್ಟ್ ಮಾಡುವುದಕ್ಕೋಸ್ಕರ ಒಂದು ಬ್ಯಾರೇಜನ್ನು ನಿರ್ಮಾಣ ಮಾಡಿ. ಇವತ್ತು ಡ್ಯಾಮ್‌ಗಳನ್ನು ಕಟ್ಟಿ ಇರತಕ್ಕ ಪರಿಸರವನ್ನು ನಾಶ ಮಾಡತಕ್ಕದ್ದು ಬೇಡ. ಇವತ್ತು ಅಲ್ಲಿ ಒಂದು ಬ್ಯಾರೇಜನ್ನು ಕಟ್ಟಿ, ಅದನ್ನು ಲಿಫ್ಟ್ ಮಾಡಿ, ತುಂಗಾದಲ್ಲಿರತಕ್ಕ ಹೆಚ್ಚುವರಿ ನೀರನ್ನು ಲಿಫ್ಟ್ ಮಾಡಿ, ಇವತ್ತು ಎಲ್ಲಿಂದ ಪ್ರಾರಂಭ ಆಗಬೇಕು ಎಂದರೆ ನನ್ನ ಕ್ಷೇತ್ರದಿಂದ ಪ್ರಾರಂಭ ಆಗತಕ್ಕದ್ದು ತುಮಕೂರಿನ ಸುಮಾರು ನಾಲ್ಕು ಪ್ರದೇಶಗಳು. ಸಗೀರ್ ಅಹಮದ್ ಅವರೇ, ನೀವು ಮಾತನಾಡಿ ವಿರೋಧ ಮಾಡುತ್ತೀರಿ ಎಂದು ನನಗೆ ಗೊತ್ತು. ನಾವಿಬ್ಬರೂ ಒಂದೇ ಪಕ್ಷದವರಾಗಿ ಏಕೆ ಕಿತ್ತಾಡೋಣ. ದಯಮಾಡಿ ಬೇಡ, ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ ಅವರಿಗೂ ಮಾತನಾಡಲು ಅವಕಾಶ ಇದೆ. ಅವರು ಏನು ವಾದ ಇಡುತ್ತಾರೆ ಎನ್ನುವುದು ನನಗೆ ಗೊತ್ತಿದೆ.

ಉಪಾಧ್ಯಕ್ಷರು : ಮಾನ್ಯ ಸಗೀರ್ ಅಹಮದ್, ಅವರೇ ನಿಮಗೆ ಅವಕಾಶ ಕೊಡುತ್ತೇನೆ ಆ ಮೇಲೆ ತಾವು ಮಾತನಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ವಿಚಾರ ಅದಲ್ಲ, ತಾವು ನನಗೆ ಅವಕಾಶ ಕಲ್ಪಿಸಿಕೊಡುತ್ತೀರಿ. ತಮಗೆ ಧನ್ಯವಾದಗಳನ್ನು ಅರ್ಪಿಸುವಂತಹ ಸಂದರ್ಭ ಇದೆ. ನಮ್ಮ ಮಿತ್ರರಾದ ಜಯಚಂದ್ರ ಅವರು ಈ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡುತ್ತಿದ್ದಾರೆ. ಇದರ ಬಗ್ಗೆ ಭಾರೀ ನೀರಾವರಿ ಮಂತ್ರಿಗಳು ಎರಡು ಸಾರಿ ಆ ಭಾಗದ ಶಾಸಕರುಗಳ ಜೊತೆ ಚರ್ಚೆ ನಡೆಸಿದ್ದಾರೆ. ನಾವು ಆ ಸಂದರ್ಭದಲ್ಲಿ ನೂರಕ್ಕೆ ನೂರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದೇವೆ. ಚಿಕ್ಕಮಗಳೂರು ಶಾಸಕರ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದೇವೆ. ಪರಿಸರವಾದಿಗಳ ವಾದವನ್ನು ಸರ್ಕಾರ ಕೇಳಬೇಕಾಗುತ್ತದೆ. ದಟ್ಟವಾದ ಕಾಡು ನಾಶ ಆಗುವ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಸರ್ಕಾರಕ್ಕೆ ಒದಗಿಸಿಕೊಟ್ಟಿದ್ದಾರೆ. ಅನೇಕ ಧಾರ್ಮಿಕ ಸಂಸ್ಥೆಗಳು, ದೇವಸ್ಥಾನಗಳು, ಮಸೀದಿಗಳು ಇವೆಲ್ಲಾ ಮುಳುಗುತ್ತವೆ ಎನ್ನುವ ಅಭಿಪ್ರಾಯ ಸರ್ಕಾರದ ಮುಂದೆ ಇದೆ. ಆದ್ದರಿಂದ ಮಾನ್ಯ ಜಯಚಂದ್ರ ಅವರು ಏನು ಒತ್ತಾಯ ಮಾಡುತ್ತಿದ್ದಾರೆ. ಆ ಭದ್ರಾ ಮೇಲ್ದಂಡೆ ಯೋಜನೆಗೆ ಸಂಪೂರ್ಣವಾದಂತ ಚಿಕ್ಕಮಗಳೂರು ಜಿಲ್ಲೆಯ ಶಾಸಕರ ಜೊತೆಗೆ, ಚಿಕ್ಕಮಗಳೂರು ಜಿಲ್ಲೆಯ ಜನತೆಯ ಸಂಪೂರ್ಣ ವಿರೋಧ ಅದಕ್ಕೆ ಇದೆ - ಎನ್ನುವ ಮಾತನ್ನು ತಮ್ಮ ಮುಖಾಂತರ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್.ಎಂ. ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯ ಎಲ್ಲ ಶಾಸಕರು ಅದಕ್ಕೆ ವಿರೋಧ ಇಲ್ಲ. ಚಿಕ್ಕಮಗಳೂರಿನಲ್ಲಿ ವಿರೋಧ ಇರಬಹುದು. ಮತ್ತೆ ನೀರಾವರಿ ಇಲಾಖೆಯ ಮಂತ್ರಿಗಳು ಸಭೆ ಕರೆದು ಮಾತನಾಡಿರುವಂತಹ ಸಂದರ್ಭದಲ್ಲಿ ಅಪ್ಪರ್ ಭದ್ರಾ ಎನ್ನತಕ್ಕ ಪದವನ್ನು ಬದಲಾಯಿಸಿ, ತುಂಗಾ ಡೈವರ್ಷನ್ ಸ್ಕೀಮ್ ಎಂದು ಹೆಸರನ್ನು ಬದಲಾಯಿಸಿ ಈ ಭಾಗದಲ್ಲಿರತಕ್ಕ ಬರಗಾಲದಿಂದ ತುತ್ತಾಗತಕ್ಕ ತಾಲ್ಲೂಕುಗಳು ಮತ್ತು ಜಿಲ್ಲೆಗಳು ಏನು ಇದೆ, ನಮ್ಮ ಚಿಕ್ಕಮಗಳೂರು ಜಿಲ್ಲೆ ಮಲೆನಾಡು ಪ್ರದೇಶವಾದರೂ ಸಹ ತರೀಕೆರೆ ಮತ್ತು ಕಡೂರು ತಾಲ್ಲೂಕು ಯಾವ ವರ್ಷವೂ ಬರಗಾಲ ಪೀಡಿತವಾದಂತಹ ಪ್ರದೇಶ. ಅಲ್ಲಿಗೂ ನೀರಾವರಿ ಆಗತಕ್ಕ ವ್ಯವಸ್ಥೆ ಆಗಬೇಕು ಎನ್ನತಕ್ಕ ದೃಷ್ಟಿಯಿಂದ ಹಿಂದೆಲ್ಲಾ ಚರ್ಚೆ ಆಗಿದೆ. ದಯವಿಟ್ಟು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಸಗೀರ್ ಅಹಮದ್ ಅವರು ಹೇಳಬೇಕು. ಅವರು ನಮ್ಮ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಶಾಸಕರು

ವಿರೋಧ ಎಂದು ಹೇಳತಕ್ಕ ಮಾತು ಸರಿಯಲ್ಲ. ಈ ಭಾಗದಲ್ಲಿ ಮುಳುಗಡೆ ಆಗುವುದಿಲ್ಲ ಎನ್ನತಕ್ಕ ವಿಚಾರವನ್ನು ಮಾನ್ಯ ಶ್ರೀ ನಾಗೇಗೌಡರು ಹೇಳಿದ್ದಾರೆ. ದಯವಿಟ್ಟು ಅವರ ಅಭಿಪ್ರಾಯ ಏನು ಇದೆ, ಅಲ್ಲಿ ಯಾವುದೂ ದೇವಸ್ಥಾನ ಮುಳುಗತಕ್ಕದ್ದು ಇಲ್ಲ. ಯಾವುದೇ ಮಸೀದಿ ಮುಳುಗತಕ್ಕದ್ದು ಇಲ್ಲ. ಯಾವುದೇ ಅರಣ್ಯ ಮುಳುಗತಕ್ಕ ಅವಕಾಶ ಇಲ್ಲದೇ ನಾವು ನೀರಾವರಿಯನ್ನು ಹರಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮಸೀದಿಗಳು ಮುಳುಗಿ ಹೋಗತಕ್ಕದ್ದು, ದೇವಸ್ಥಾನ ಮಳುಗಿ ಹೋಗತಕ್ಕದ್ದು ಇದ್ದರೆ ಅವರ ಅಭಿಪ್ರಾಯವನ್ನು ತಿಳಿಸಲಿ. ಆದರೆ ಎಲ್ಲರ ಅಭಿಪ್ರಾಯ ತಮ್ಮದು ಎನ್ನತಕ್ಕದ್ದನ್ನು ದಯವಿಟ್ಟು ಅವರು ವಾಪಸ್ ಪಡೆಯಬೇಕೆಂದು ನಾನು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಸಗೀರ್ ಅಹಮದ್ ಅವರೇ ತಾವು ಕೂಡಿ. ನಿಮಗೆ ಅವಕಾಸ ಕೊಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಜಿಲ್ಲೆಗೆ ಸಂಬಂಧಪಟ್ಟ ವಿಚಾರವನ್ನು ಮಾತನಾಡುತ್ತಿದ್ದಾರೆ.

(ಗೊಂದಲ)

+ ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೆ, ಈಗ ನಮ್ಮ ಭಾರೀ ನೀರಾವರಿ ಸಚಿವರು, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ ಜಿಲ್ಲೆಯ ಶಾಸಕರನ್ನು ಹಾಗೂ ಸಂಸತ್ ಸದಸ್ಯರನ್ನು ಕರೆದು ಮಿಟಿಂಗ್ ಮಾಡಿದ್ದರು. ಮಾನ್ಯ ಸಗೀರ್ ಅಹಮದ್ ಅವರೂ ಇದರಲ್ಲಿದ್ದರು. ಅವರು ಹೇಳಿದ ಪ್ರಕಾರ, ಅವತ್ತು ನಮಗೆ ಮಾಹಿತಿ ಕೊಟ್ಟ ಪ್ರಕಾರ ಯಾವುದೇ ದೇವಸ್ಥಾನವಾಗಲೀ, ತುಂಗಾ ಮತ್ತು ಭದ್ರಾ ಲಿಫ್ಟ್ ಇರಿಗೇಷನ್ ಏನು ಮಾಡುತ್ತಿದ್ದಾರೆ, ಅದರಲ್ಲಿ ಯಾವುದೂ ಅರಣ್ಯನಾಶ ಆಗುವುದಿಲ್ಲ ಮತ್ತು ಯಾವುದೇ ದೇವಸ್ಥಾನಗಳಿಗೂ ತೊಂದರೆ ಆಗುವುದಿಲ್ಲ ಎಂದು ಹೇಳಿದ್ದಾರೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯ ಮಾನ್ಯ ಮಂತ್ರಿಗಳಾದ ಶ್ರೀ ಗೋವಿಂದೇಗೌಡರೂ ಇದ್ದರು ಮತ್ತು ಸಂಸತ್‌ಸದಸ್ಯರೂ ಇದ್ದರು. ಮಾನ್ಯ ಸಗೀರ್ ಅಹಮದ್ ಅವರಿಗೆ ಅದು ಚೆನ್ನಾಗಿ ಗೊತ್ತಿದೆ. ಅವರು ಇದರೊಳಗೆ ಯಾವುದೇ ರಾಜಕೀಯ ಬೆರಸದೆ ಮಾಡನಾಡಲಿ. ನಮ್ಮ ಜಿಲ್ಲೆ ಯಾವಾಗಲೂ ಬರಗಾಲ ಇರತಕ್ಕ ಪ್ರದೇಶ. ನಮಗೆ ಚಿತ್ರದುರ್ಗ, ಜಗಳೂರು, ಚಳ್ಳಕೆರೆ ತಾಲ್ಲೂಕು ಮತ್ತು ದಾವಣಗೆರೆ ತಾಲ್ಲೂಕಿಗೆ ಇದರಿಂದ ಅನುಕೂಲ ಆಗುತ್ತದೆ. ಅವರಿಗೆ ಯಾವುದೇ ತರಹದ ಕಾಡುಗಳು ಮುಳುಗಡೆ ಆಗುವುದಿಲ್ಲ. ದಯವಿಟ್ಟು ತಪ್ಪು ಮಾಹಿತಿಯನ್ನು ಅವರು ಕೊಡಬಾರದು. ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಮಾನ್ಯ ಜಯಚಂದ್ರ ಅವರು ಹೇಳಿರುವುದು ಕರೆಕ್ಟ್ ಇದೆ.

(ಗೊಂದಲ)

ಉಪಾಧ್ಯಕ್ಷರು : ಸಗೀರ್ ಅಹಮದ್ ಅವರು ಈ ತರಹ ಮಧ್ಯೆ ಮಧ್ಯೆ ಮಾತನಾಡಬಾರದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇದು ಕೇವಲ ಜನರ ಬದುಕಿಗಾಗಿ ಇರುವಂತಹ ವಿಚಾರವಲ್ಲ. ಇವತ್ತು ಒಂದು ಕಡೆ ಒಂದು ಲಕ್ಷ ಜನ ಬದುಕುತ್ತಾರೆಂದು

ಹೇಳಿದರೆ ಇನ್ನೊಂದು ಕಡೆ ಒಂದು ಲಕ್ಷ ಜನ ಸಾಯುತ್ತಾರೆ. ಆದುದರಿಂದ ನಾನೇನು ಹೇಳುತ್ತಿದ್ದೇನೆ ಅಂದರೆ ನೀರಾವರಿ ಯೋಜನೆ ಮಾಡಬೇಕಾದರೆ ಈಗ ಮಾಹಿತಿ ದೊರಕಿಸಿ ಕೊಟ್ಟಿರುವಂತೆ ಏತ ನೀರಾವರಿ ಯೋಜನೆ ಮಾಡಬೇಕಾದರೆ ಈಗ ಮಾಹಿತಿ ದೊರಕಿಸಿ ಕೊಟ್ಟಿರುವಂತೆ ಏತ ನೀರಾವರಿ ಯೋಜನೆ ಮಾಡುವ ಬಗ್ಗೆ ನಾವು ವಿರೋಧವಿಲ್ಲ ಎಂದು ಹೇಳಿದ್ದೇವೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಸಹ ಹೇಳಿದ್ದಾರೆ. ಆದರೆ ಭಾರೀ ನೀರಾವರಿ ಮಂತ್ರಿಗಳು ಏನು ಹೇಳಿದ್ದಾರೆ ಎಂದರೆ ಯಾವುದೇ ರೀತಿಯಲ್ಲಿ ಅರಣ್ಯ ನಾಶಪಡಿಸದೆ ನಾವು ನೀರು ತೆಗೆದುಕೊಂಡು ಹೋಗುವಂತಹ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ನನ್ನ ವಾದ ಏನು ಅಂದರೆ, ಯಾವುದೇ ಕಾರಣಕ್ಕಾಗಲಿ ಅರಣ್ಯ ನಾಶ ಆಗುವುದಕ್ಕೆ ನಾವಂತೂ ಬಿಡುವುದಿಲ್ಲ ಎನ್ನುವುದನ್ನು ತಮ್ಮ ಮುಖಾಂತರ ಅವರ ಗಮನಕ್ಕೆ ತರುತ್ತೇನೆ.

(ಗೊಂದಲ)

ಶ್ರೀ ಎಂ.ಎಸ್. ನಾಗರಾಜ್ : ಸನ್ಮಾನ್ಯ ಉಪಾಧ್ಯಕ್ಷರೆ, ಅರಣ್ಯ ಲೂಟಿ ಆಗುತ್ತಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಏನು ಅರಣ್ಯ ಲೂಟಿ ಆಗುತ್ತಿದೆ ಅದರಲ್ಲಿ ಮಾನ್ಯ ನಾಗರಾಜ್ ಅವರೂ ಪಾಲುದಾರರು ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಗಂಗಹನುಮಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಯಚಂದ್ರ ಅವರು ನಮ್ಮ ಮಧುಗಿರಿ ಸಬ್ ಡಿವಿಜನ್ ಮೊದಲಿನಿಂದ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಹೇಳುತ್ತಿದ್ದಾರೆ. ಅದು ನಿಜ. ನಾವು ಬಹಳ ಕಷ್ಟ ಅನುಭವಿಸುತ್ತಿದ್ದೇವೆ. ಅವರು ಏನು ಹೇಳುತ್ತಿದ್ದಾರೆ; ಅದಕ್ಕೆ ನಮ್ಮ ಅನುಮೋದನೆ ಇದೆ. ಸರ್ಕಾರದಲ್ಲೂ ಕೂಡ ಅದಕ್ಕೆ ಒಂದು ಅನುಕೂಲತೆ ಸಿಕ್ಕಬೇಕು ಎನ್ನುವ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ತಾವು ದಯಮಾಡಿ ಕೂಡಿ.

ಶ್ರೀ ಟಿ.ಬಿ. ಜಯಚಂದ್ರ : ಪಕ್ಷಾತೀತವಾದಂತಹ ಸರ್ವಾನುಮತದ ಒಂದು ಒಟ್ಟಾರೆ ಅಭಿಪ್ರಾಯ ಇವತ್ತು ಬಂದಂತೆ ಆಗಿದೆ. ನನ್ನು ಚಿಂತನೆಗೆ ಅವರು ಪುಷ್ಟೀಕರಿಸಿದ್ದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಲ್ಲಿ ಕುಳಿತಿರತಕ್ಕಂತಹ ಮೂರು ಜನರೂ ಕೂಡ ಇವತ್ತು ಇಂಡಿಪೆಂಡೆಂಟ್ ಆಗಿ ಗೆದ್ದು ಸಹ ಸದಸ್ಯರಾಗಿರತಕ್ಕವರು. ಅವರ ವ್ಯೂಸ್ ಏನು ಇದೆ ಅದು ಇಂಡಿಪೆಂಡೆಂಟ್ ವ್ಯೂಸ್ ಅದಕ್ಕೋಸ್ಕರ ಜನ ಆಯ್ಕೆ ಮಾಡಿದ್ದಾರೆ. ಅವರು ನಮಗೆ ಇವತ್ತು ಬೆಂಬಲ ಕೊಟ್ಟಿರುವುದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಯಾವುದೇ ಸಂದರ್ಭದಲ್ಲಿಯೂ ಕೂಡ ಚಿಕ್ಕಮಗಳೂರಿನ ಪರಿಸರ ನಾಶ ಆಗುವುದಕ್ಕೆ ನಮ್ಮ ವಿರೋಧ ಇಲ್ಲ. ನಾನು ಸಾಮಾನ್ಯವಾಗಿ ಹೇಳತಕ್ಕ ಸಲಹೆಯನ್ನು ತಾವು ಚಿಂತನೆ ಮಾಡಬೇಕು. ಈಗಾಗಲೇ ನೀವು ಅದರ ಡೀಟೇಲ್ ಸರ್ವೆ ಮಾಡಿಸಿ. ತಾವೆಲ್ಲರೂ ಕೂಡ ಯೋಚನೆ ಮಾಡಿ. ಇವತ್ತು ನೀವು ಮಹಾಗುಡಿ ಹತ್ತಿರ, ನಂತರ ಎನ್.ಆರ್. ಪುರ ಮಧ್ಯೆದಲ್ಲಿ ಒಂದು ಬ್ಯಾರೇಜನ್ನು ಕಟ್ಟಿ ಸಾಕು. ನಿಮಗೆ ಪರಿಸರ ನಾಶ ಆಗುವುದಕ್ಕೆ ಸಾಧ್ಯ ಇಲ್ಲ. ಕಾಡು ಹಾಳಾಗುವುದಿಲ್ಲ, ಕಾಫಿ ಎಸ್ಟೇಟ್ ಹೋಗುವುದಿಲ್ಲ.

ಇಲ್ಲಿ ಏನಾಗಿದೆಯೆಂದರೆ, ಇದರಲ್ಲಿ ತಾಂತ್ರಿಕವಾಗಿ ಅವರಿಗೆ ಗೊತ್ತಿಲ್ಲವೆಂದೇನೂ ಇಲ್ಲ, ನಾವು ಅವರಿಗೆ ಬೇಕಾಗಿಲ್ಲ, ಅಧಿಕಾರಿಗಳ ಗಮನವೆಲ್ಲವೂ ಬೇರೆ ಕಡೆಗಿದೆ. ಅದಕ್ಕೋಸ್ಕರ ಬ್ಯಾರೇಜ್ ಕಟ್ಟಿ ನೀರನ್ನು ಡೈವರ್ಟ್ ಮಾಡುವುದಾದರೆ ನಿಜವಾಗಿಯೂ ಹೆಚ್ಚು ನೀರಿನ ಲಭ್ಯತೆಯನ್ನು ಇವೊತ್ತು ಕ್ರೋಢೀಕರಿಸಿ ಕೇಂದ್ರ ಸರ್ಕಾರಕ್ಕೆ ವರ್ತಮಾನವನ್ನು ಕಳುಹಿಸುವಂಥ ಸಂದರ್ಭವಾದರೆ ಬಹುಶಃ ಹೆಚ್ಚು ಲಾಭವಾಗುತ್ತದೆ ಮತ್ತು ಈಗಾಗಲೇ ಯೋಜನೆ ಕೂಡ ಮಂಜೂರಾಗಿರುವಂಥ ಸಂದರ್ಭದಲ್ಲಿ ಬಳಕೆಗೆ ಇವೊತ್ತು ಕಾಲಾವಕಾಶ ಬೇಕಾಗುತ್ತದೆಂದು ಹೇಳುವುದಕ್ಕೆ ಕೂಡ ಒಂದು ಅವಕಾಶವಿರುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವೊತ್ತು ಸರ್ಕಾರದ ಮುಂದೆ ಯೋಜನೆ ಇದ್ದು ಅದನ್ನು ವಿವರವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಚಿತ್ರದುರ್ಗಕ್ಕೆ ಮೊದಲ ಆದ್ಯತೆ ನಂತರ ತುಮಕೂರಿಗೆ ಆದ್ಯತೆ ಎಂಬ ವಾದವನ್ನು ಬಿಟ್ಟುಬಿಡಿ. ನಾನು ಕೇಳುತ್ತಿರುವುದಿಷ್ಟೆ: ಕನಿಷ್ಠವಾಗಿ ಮುಂದೆ ದೊರೆಯತಕ್ಕ ನೀರಿನಲ್ಲಿ ನೀವು 80 ಟಿ.ಎಂ.ಸಿ.ಯಷ್ಟು ನೀರನ್ನು ಕೊಡುವುದಾದರೆ ನಿಮ್ಮ ಎಲ್ಲಾ ಯೋಜನೆಗಳೂ ಕೂಡ ಇವೊತ್ತು ಫೀಸಿಬಲ್ ಆಗುತ್ತವೆ.

ಇವೊತ್ತು ಮಾತು ಮಾತಿಗೂ ಬಿ ಅಂಡ್ ಸಿ ರೇಶಿಯೋ ಎಂದು ಹೇಳುತ್ತಾರೆ. 1982ರ ಕೇಂದ್ರೀಯ ಜಲ ಸಂಪನ್ಮೂಲ ಆಯೋಗದ ತೀರ್ಮಾನದ ಪ್ರಕಾರ ಯಾವುದೇ ಒಂದು ಬರಪೀಡಿತ ಪ್ರದೇಶದಲ್ಲಿ ಯೋಜನೆ ಹಮ್ಮಿಕೊಳ್ಳಬೇಕಾದರೆ ಬಿ ಅಂಡ್ ಸಿ ರೇಶಿಯೋ ಅನ್ವಯವಾಗುವುದಿಲ್ಲ. ಆದುದರಿಂದ, ತಾವು ಇದನ್ನು ಗಮನಿಸದೇ ಹೇಳಬೇಕು. ನೀವು ಕೇಂದ್ರ ಸರ್ಕಾರಕ್ಕೆ ಮಾಹಿತಿ ಕೊಡುವಂಥ ಸಂದರ್ಭದಲ್ಲಿ ತಪ್ಪು ಮಾಹಿತಿಯನ್ನು ಕೊಡುವುದು ಬೇಡ. ಈಗ ವಿವರವಾಗಿ ಸಮೀಕ್ಷೆ ನಡೆಸಿ ಮಾಹಿತಿಯನ್ನು ಕಳುಹಿಸತಕ್ಕಂಥ ಒಂದು ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ಪ್ರಧಾನಮಂತ್ರಿಗಳು ಬಹಳ ಉತ್ಸುಕರಾಗಿದ್ದಾರೆ. ಅವರು ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರಿಗೆ ಮಾತು ಕೊಟ್ಟ ನಂತರ ಏನಾದರೂ ಮಾಡಿ ಚಿತ್ರದುರ್ಗ ಮತ್ತು ತುಮಕೂರಿಗೆ ನೀರು ಕೊಡುವ ಸಂಕಲ್ಪ ಏನು ಮಾಡಿದ್ದಾರೆ, ಇವೊತ್ತು ಕೇಂದ್ರದಲ್ಲಿ ಅವರು ಪ್ರಧಾನಮಂತ್ರಿಗಳಾಗಿರುವ ಸಂದರ್ಭದಲ್ಲಿ ಸದರಿ ಯೋಜನೆಯನ್ನು ಕ್ಲಿಯರೆನ್ಸ್ ಮಾಡಬೇಕಾದರೆ ಹೆಚ್ಚು ಅವಕಾಶವಿದೆ. ಆದುದರಿಂದ, ದಯಮಾಡಿ ಅದರ ಬಗ್ಗೆ ಚಿಂತನೆ ಮಾಡಬೇಕು. ಬಜಾವತ್ ತೀರ್ಪಿನಲ್ಲೂ ಕೂಡ ಕೋಲಾರವನ್ನೂ ಸೇರಿಸಿ ನೀರು ಕೊಡಬೇಕೆಂದು ಪ್ರಸ್ತಾಪವಾಗಿದೆ. ಇವೊತ್ತು ಕೋಲಾರ, ಗೌರಿಬಿದನೂರು, ತುಮಕೂರಿನ ಪಾವಗಡ, ಮಧುಗಿರಿ ಮುಂತಾದ ಎಲ್ಲಾ ಪ್ರದೇಶಗಳಿಗೂ ಸೇರಿಸಿ ನೀರು ಕೊಡುವ ಸಾಧ್ಯತೆಯಿದೆ. ನಾನು ಒಂದು ಮಾತನ್ನು ಮಾನ್ಯ ಸದಸ್ಯರಾದ ಸಗೀರ್ ಅಹಮದ್ ರವರಿಗೆ ಹೇಳುತ್ತಿದ್ದೇನೆ. ಬಹುಶಃ ಇವೊತ್ತು ಕೊಜೆಂಟ್ರಿಕ್ಸ್ ಯೋಜನೆಯನ್ನು ಅನುಷ್ಠಾನಗೊಳಿಸುವಂಥ ಸಂದರ್ಭದಲ್ಲಿ ಅಲ್ಲಿನ ಸುತ್ತಮುತ್ತ ಪರಿಸರ ನಾಶವಾಗುತ್ತದೆಂದು ಹೇಳುತ್ತಾರೆ, ಪರಿಸರ ನಾಶವಾಗುವುದಿಲ್ಲವೆಂದಲ್ಲ. ಆದರೆ, ಯೋಜನೆ ಅನುಷ್ಠಾನದಿಂದ ಲಾಭವಾಗುವುದರ ಬಗ್ಗೆ ಕೂಡ ಯೋಚಿಸಬೇಕಾಗುತ್ತದೆ.

ಇವೊತ್ತು ಅಲ್ಲೊಂದು ಯೋಜನೆ ಜಾರಿಯಾಗುವುದರಿಂದ 3,000-4,000-5,000 ಎಕರೆಗಳಷ್ಟು ಪ್ರದೇಶ ಕೈಬಿಟ್ಟು ಹೋಗಬಹುದು. ಆದರೆ, ಹತ್ತು ಲಕ್ಷ ಎಕರೆಗಳಷ್ಟು ಪ್ರದೇಶಕ್ಕೆ ನೀರು ಒದಗಿಸುವಂಥ ಸಂದರ್ಭ ಬರುತ್ತದೆ. ಇವೊತ್ತು ಪರಿಸರ ನಾಶವಾಗಿ ಅಸಮತೋಲನ ಒಂದು ಕಡೆ ಉಂಟಾದರೆ, ಮತ್ತೊಂದು ಕಡೆ ಕಾಡು ನಿರ್ಮಾಣವಾಗುತ್ತದೆ, ಕಾಡನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಕೊಡಿ. ನಾವು

ಈ ರೀತಿ ದೃಷ್ಟಿಯಿಟ್ಟುಕೊಂಡು ಹೋಗದಿದ್ದರೆ ಇವೊತ್ತು ಬರಪೀಡಿತ ಪ್ರದೇಶಗಳಿಗೆ ನೀರಿನ ಸೌಲಭ್ಯ ಒದಗಿಸುವುದಕ್ಕೆ ಸಾಧ್ಯವಿಲ್ಲವೆಂಬ ವಾದವನ್ನು ಇಟ್ಟು ಹೇಳುತ್ತೇನೆ. ನಾನು ಇವೊತ್ತು ಸರ್ಕಾರದಿಂದ ಸ್ಪಷ್ಟ ಉತ್ತರ ಬಯಸುವುದೇನೆಂದರೆ, ತಾವು ಉತ್ತರ ಕೊಡುವ ಸಂದರ್ಭದಲ್ಲಿ ನಿಮ್ಮ ಯೋಜನೆಯ ರೂಪುರೇಷೆಗಳ ಬಗ್ಗೆ ಅಂತಿಮ ತೀರ್ಮಾನ ಕೊಡಬೇಕಾಗುತ್ತದೆ. ಅದರಲ್ಲಿ ಕಿಂಚಿತ್ ಏನಾದರೂ ತುಮಕೂರು ಜಿಲ್ಲೆಯನ್ನು ಬಿಟ್ಟಂಥ ಸಂದರ್ಭಗಳೇನಾದರೂ ಇದ್ದರೆ ಇವೊತ್ತು ನಿಮ್ಮ ಯೋಜನೆಗಳು ಕೂಡ ಕೋಲ್ಡ್ ಸ್ಟೋರೇಜ್ ನಲ್ಲಿಡುವಂಥ ಯೋಜನೆಗಳಾಗುವುದಾದರೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಇವೊತ್ತು ಯಾರನ್ನೂ ಮೆಚ್ಚಿಸುವುದಕ್ಕೆ ಯೋಜನೆಗಳನ್ನು ಕೈಗೊಳ್ಳಬೇಕಾಗಿಲ್ಲ. ನಮ್ಮ ನೀರಿನ ಹಕ್ಕನ್ನು ನಾವು ಉಳಿಸಿಕೊಳ್ಳಲೇಬೇಕು; ನಮ್ಮ ಜನರಿಗೆ ಸಹಾಯವಾಗಬೇಕು,

ಇವೊತ್ತು ನೊಂದಿರುವ ನಮ್ಮ ಜನರಿಗೆ ಸಹಾಯವಾಗಬೇಕಾದರೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಇವೊತ್ತು ಕಾವೇರಿ ನದಿ ನೀರಿನ ಬಗ್ಗೆ ವಿವಾದವಿದ್ದು, ಇದು ಯಾವ ಹಂತವನ್ನು ಮುಟ್ಟಿದೆ? ಪ್ರಸಕ್ತ ವರ್ಷಕ್ಕೆ ಲೆಕ್ಕ ಹಾಕುವುದಾದರೆ, ಇದು ಸುಮಾರು ನೂರು ವರ್ಷಗಳಿಗೂ ಹಳೆಯಲಾದ ಈ ವಿವಾದವನ್ನು ಬಗೆಹರಿಸುವುದಕ್ಕೆ ಈಗ ಒಂದು ಅವಕಾಶ ಕೂಡ ಇದ್ದು, ಈಗಾಗಲೇ ಸರ್ವೋಚ್ಛ ನ್ಯಾಯಾಲಯ ಕೊಟ್ಟಿರುವ ತೀರ್ಮಾನದ ಪ್ರಕಾರ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೆಡೆ ಸೇರಿ ಪರಸ್ಪರ ಚರ್ಚಿಸಿದ್ದು, ಏನು ಚರ್ಚಿಸಿದ್ದಾರೆನ್ನುವುದು ಬೇರೆ ಪ್ರಶ್ನೆ. ಈ ದಿಶೆಯಲ್ಲಿ ನಾನು ಒಂದು ಸಲಹೆ ಕೊಡಲು ಇಷ್ಟಪಡುತ್ತೇನೆ: ಯಾವತ್ತಾದರೂ ಕೂಡ ಸದರಿ ವಿವಾದ ಇತ್ಯರ್ಥಗೊಳ್ಳಲೇಬೇಕು. ವರ್ಷಕ್ಕೆ 205 ಟಿ.ಎಂ.ಸಿ.ಯಷ್ಟು ನೀರನ್ನು ಬಿಡುಗಡೆಗೊಳಿಸುವ ಬಗ್ಗೆ ತಾತ್ಕಾಲಿಕವಾದ ತೀರ್ಪು ಏನು ಕೊಟ್ಟಿದ್ದಾರೆ, ಬಹುಶಃ ಇದರ ಬಗ್ಗೆ ಅಂತಿಮ ತೀರ್ಪು ಬರುವ ಸಂದರ್ಭದಲ್ಲಿ ಇದರಲ್ಲಿ ಸ್ವಲ್ಪ ಕಡಿಮೆಯಾಗಬಹುದು ಇಲ್ಲವೇ ಇನ್ನೇನೋ ಆಗಬಹುದೆಂದು ಭಾವಿಸುತ್ತೇನೆ. ಆಗ ಎಂದಾದರೂ ನಾವು ನೀರು ಕೊಡಬೇಕಾಗಿರುವ ಸಂದರ್ಭವಿರಬೇಕಾದರೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮತ್ತು ತಮಿಳುನಾಡು ಸರ್ಕಾರಕ್ಕೆ ತಿಳಿಯಪಡಿಸಬೇಕು.

ಇವೊತ್ತು ಬೇಕಾಗಿರತಕ್ಕ ನೀರನ್ನು ಸಂಗ್ರಹಿಸಿಕೊಳ್ಳುವ ಸಾಮರ್ಥ್ಯವನ್ನು ಸೃಷ್ಟಿ ಮಾಡುವುದು. ಸಂಗ್ರಹಣಾ ಸಾಮರ್ಥ್ಯವನ್ನು ಯಾವ ರೀತಿ ಸೃಷ್ಟಿಸುವುದು? ಇವೊತ್ತು ಮೆಟ್ಟೂರು ಜಲಾಶಯದ ಅಣೆಕಟ್ಟಿನ ಮೇಲ್ದಂಡೆಯಲ್ಲಿ ಹೊಗೇನಕಲ್ ಜಲಪಾತವಿದ್ದು, ಅಲ್ಲೊಂದು ಅಣೆಕಟ್ಟು ಕಟ್ಟಿ ಸುಮಾರು 25 ಟಿ.ಎಂ.ಸಿ.ಯಷ್ಟು ನೀರನ್ನು ಸಂಗ್ರಹಿಸಲು ನಿಜವಾಗಿಯೂ ಅವಕಾಶ ಇದೆಯೆಂದು 20-25 ವರ್ಷಗಳ ಹಿಂದೆಯೇ ಕೇಂದ್ರ ಸರ್ಕಾರದವರು ಹೇಳಿದ್ದರು. ಆದುದರಿಂದ ಅವರು ಅಣೆಕಟ್ಟು ಕಟ್ಟಲಿ. ಕರ್ನಾಟಕ ಗಡಿಭಾಗದ ಮತ್ತು ಮೆಟ್ಟೂರು ಅಣೆಕಟ್ಟು ಹತ್ತಿರ ಬರುವ ಆ ಪ್ರದೇಶದಲ್ಲಿ ಒಂದು ಅಣೆಕಟ್ಟು ಕಟ್ಟಬೇಕು, ಆ ನೀರು ನಮಗೆ ಬಳಕೆಯಾಗುವುದಿಲ್ಲ. ಅಲ್ಲಿ ಬರುವುದು ವಿವಿಧೋದ್ದೇಶದ ಯೋಜನೆಯಾಗುತ್ತದೆ. ಇವೊತ್ತು ನಮ್ಮ ಬಳಿ ಇರುವ ಮಾಹಿತಿ ಪ್ರಕಾರ ಅಲ್ಲಿ ಸುಮಾರು 400 ಮೆಗಾವ್ಯಾಟ್ ನಿಂದ 600 ಮೆಗಾವ್ಯಾಟ್ ಗಳವರೆಗೆ ವಿದ್ಯುತ್ ಉತ್ಪಾದನೆ ಮಾಡಬಹುದು. ಇಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಬೇಕಾದರೆ ಒಂದು ಮೆಗಾವ್ಯಾಟ್‌ಗೆ ಸುಮಾರು ನಾಲ್ಕು ಕೋಟಿ ರೂಪಾಯಿಗಳು ಬೇಕಾಗಿದ್ದು, 500 ಮೆಗಾವ್ಯಾಟ್ಗಳೆಂದರೆ 2,000 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದುದರಿಂದ, ಇಷ್ಟು ಹಣವನ್ನು ಉಳಿಸಿದಂತೆಯೂ ಆಗುತ್ತದೆ. ಒಂದು

ಕಡೆ ತಮಿಳುನಾಡಿಗೂ ನಾವು ನೀರು ಕೊಟ್ಟಂತಾಗುತ್ತದೆ, ಇನ್ನೊಂದು ಕಡೆ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದಂತೆಯೂ ಆಗುತ್ತದೆ. ಇವೊತ್ತು ಪ್ರಶ್ನೆ ಉದ್ಭವಿಸಿರುವುದು ಅಲ್ಲಿ ಯಾರು ಅಣೆಕಟ್ಟು ಕಟ್ಟಬೇಕೆಂಬುದು. ಇವೊತ್ತು ತಮಿಳುನಾಡಿಗೆ ಏನಾಗಿದೆಯೆಂದರೆ, ಬೆಳಿಗ್ಗೆ ಎದ್ದರೆ ಜಗಳ ಮಾಡಬಹುದು. ಕರ್ನಾಟಕದವರು ಯಾವ ರೀತಿ ಹೆದರುತ್ತಾರೆಂದರೆ, ನಾವು ಜಗಳ ಮಾಡಿದರೆ ನಮಗೆ ನೀರು ಬಿಡುತ್ತಾರೆ, ನಾವೇಕೆ ಅಣೆಕ್ಟು ಕಟ್ಟಬೇಕೆಂಬ ತಮಿಳುನಾಡಿನವರ ಮನೋಭಾವವೇನಿದೆ, ಅವರಿಗೆ ಪಾಠ ಕಲಿಸಬೇಕಾದರೆ ಇವೊತ್ತು ತುಮಕೂರು ಜಿಲ್ಲೆಗೆ ನೀರಿನ ಸೌಲಭ್ಯವೊದಗಿಸಲು ಹೇಮಾವತಿ ಯೋಜನೆಯನ್ನು ಹಮ್ಮಿಕ್ಕೊಂಡಿದ್ದು, ಇನ್ನೂ ನಾಲ್ಕು ವರ್ಷಗಳು ಬೇಕೆಂಬ ಮಾತನ್ನು ಏನು ಹೇಳುತ್ತಿದ್ದೀರಿ, ಆ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಿ ನೀರು ಒದಗಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಅಲ್ಲಿ ಅವರಿಗೆ ನೀರಿನ ಕೊರತೆ ಎಷ್ಟಿದೆ ಎಂದು ಗೊತ್ತಾಗುತ್ತದೆ.

ಇವೊತ್ತು ನಮ್ಮಲ್ಲಿರುವ 11 ಲಕ್ಷ ಎಕರೆಗಳಷ್ಟು ಪ್ರದೇಶಗಳಿಗೆ ಸಂಪೂರ್ಣವಾಗಿ ನೀರಿನ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವುದಕ್ಕೆ ಜವಾಬ್ದಾರಿ ಹೊರಬೇಕಾಗುತ್ತದೆ. ಎರಡು ಯೋಜನೆಗಳು, ಒಂದು ಮೆಟ್ಟೂರು ಅಣೆಕಟ್ಟು ಹತ್ತಿರ, ಮತ್ತೊಂದು ಹೊಗೇನಕಲ್ ಜಲಪಾತದ ಹತ್ತಿರ ಅಂದರೆ, ಒಂದು ಯೋಜನೆ ಕರ್ನಾಟಕಕ್ಕೆ ಮತ್ತೊಂದು ತಮಿಳುನಾಡಿಗೆ ಬರುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮನವೊಲಿಸಿ, ಅವರು ಸಹಕಾರ ಕೊಟ್ಟು ಮಧ್ಯೆ ನಿಂತು ಇದನ್ನು ರಾಷ್ಟ್ರೀಯ ಯೋಜನೆಯಿಂದಾಗಲೀ ಅಥವಾ ಏನಾದರೊಂದು ಮಾಡಿದರೆ ಇರುವ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಿದಂತಾಗುತ್ತದೆಯಲ್ಲದೆ, ನಮಗೆ ಆಂತರಿಕವಾಗಿ ಇರುವ ವಿದ್ಯುತ್ ಕೊರತೆಯೂ ಕೂಡ ಬಗೆಹರಿಯುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ಸದರಿ ಯೋಜನೆಯನ್ನು ಕಾರ್ಯಗತಗೊಳಿಸಬೇಕಾದರೆ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಾದರೆ ಅನೇಕ ತರಹದ ಅಡ್ಡಿ ಆತಂಕಗಳಿವೆ. ಆ ಅಡ್ಡಿ-ಆತಂಕಗಳು ಯಾವುವೆಂದರೆ ಪುನರ್ವಸತಿಯ ಸಮಸ್ಯೆ.

ಪುನರ್ವಸತಿ ಸಮಸ್ಯೆ ಇರುವಂಥ ಸಂದರ್ಭದಲ್ಲಿ ಇಲ್ಲಿಯವರೆವಿಗೂ ವಿಶ್ವಬ್ಯಾಂಕಿನಿಂದ ನಮಗೆ ಹಣ ಸಮರ್ಪಕವಾಗಿ ಬರಲಿಲ್ಲ, ಹಣ ಬರುವುದು ಕೂಡ ನಿಂತುಹೋಯಿತು. ಕಾರಣ, ಯೋಜನೆಗಳನ್ನು ಅನುಷ್ಠಾನಗೊಳಿಸಲು ಭೂ ಸ್ವಾಧೀನಪಡಿಸಿಕೊಂಡಾಗ ನಿರ್ವಸಿತರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುವುದಕ್ಕೆ ಪ್ರಾಮುಖ್ಯತೆ ಕೊಡಲಿಲ್ಲ. ಈಗಾಗಲೇ ಅಲ್ಲಿಗೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನೇಮಿಸಿ ಕಾರ್ಯಕ್ರಮವನ್ನು ನೀವು ಚುರುಕುಗೊಳಿಸಿದಿರಿ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇವೊತ್ತು ನೀವು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡು ಅನುಷ್ಠಾನಗೊಳಿಸಲು ಹೋಗುತ್ತಿರುವ ವೇಗ ಏನೇನೂ ಸಾಲದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಕಾಮಗಾರಿಯ ವೇಗವನ್ನು ಇನ್ನಷ್ಟು ಚುರುಕುಗೊಳಿಸಬೇಕು.

ಇನ್ನು ಉಪಾಧ್ಯಕ್ಷರಾಗಿ ತಾವು ಪೀಠದಲ್ಲಿ ಆಸೀನರಾಗಿದ್ದೀರಿ, ತಾವು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾನು ಒಂದು ವಿಷಯ ಹೇಳುವುದಾದರೆ, ಇವೊತ್ತು ನಿಮ್ಮ ಅನೇಕ ಜನ ಸ್ನೇಹಿತರುಗಳು ಸಿಕ್ಕಿ ಮಾತನಾಡಿದರು. ಕಾಗದಾಳ ಎನ್ನುವ ಗ್ರಾಮ ತಮ್ಮ ಮತಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಆ ಕ್ಷೇತ್ರದ ಜನರೇ ಹೆಚ್ಚಾಗಿ ತಮಗೆ ಮತ ನೀಡಿದ್ದಾರೆ. ಅಲ್ಲಿ ಏನಾಗಿದೆಯೆಂದರೆ, ಮಲಪ್ರಭಾ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಲಾಗಿದ್ದು, ಇವೊತ್ತು

ಆ ಪ್ರದೇಶದ ಸುತ್ತಮುತ್ತಲೂ ಅಂತರ್ಜಲ ವೃದ್ಧಿಯಾಗಿ ಊರಿನಲ್ಲಿರುವ ಎಲ್ಲಾ ಮನೆಗಳು ಕುಸಿದು ಹೋಗುತ್ತಿವೆ. ಇದರಿಂದಾಗಿ ಅಲ್ಲಿನ ಗ್ರಾಮಸ್ಥರು ಬದುಕುವುದಕ್ಕೆ ಕಷ್ಟವಾಗಿದ್ದು ಇಡೀ ಹಳ್ಳಿಯನ್ನೇ ಸ್ಥಳಾಂತರಿಸುವ ಬಗ್ಗೆ ಜಿಲ್ಲಾಧಿಕಾರಿಯಿರಬಹುದು, ನೀರಾವರಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಯಾರೂ ಕೂಡ ಅದರ ಬಗ್ಗೆ ಕಾಳಜಿವಹಿಸಲಿಲ್ಲ. ಈ ವಿಷಯವನ್ನು ನಾನು ಪ್ರಾಸ್ತಾವಿಕವಾಗಿ ಪ್ರಸ್ತಾಪಿಸುತ್ತಿದ್ದೇನೆ. ಏಕೆಂದರೆ, ಉಪಾಧ್ಯಕ್ಷರ ಮನವೊಲಿಸಿ ಹೆಚ್ಚು ಕಾಲಾವಕಾಶ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಇಂತಹ ಸಮಸ್ಯೆಗಳೇ ಜಾಸ್ತಿ ಇರುವುದರಿಂದ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸಂಪನ್ಮೂಲವನ್ನು ಕ್ರೋಢೀಕರಿಸುವುದರ ಬಗ್ಗೆ ಹೇಳುವುದಾದರೆ, ಸಂಪನ್ಮೂಲವನ್ನು ಯಾವ ರೀತಿ ಕ್ರೋಢೀಕರಿಸಬೇಕು? ಡಿಸೆಂಬರ್, 1996ರ ಅಂತ್ಯಕ್ಕೆ ವಿಶ್ವಬ್ಯಾಂಕಿನಿಂದ ಈಗಾಗಲೇ ಬರುತ್ತಿರುವ ಎಲ್ಲಾ ಹಣಕಾಸಿನ ಸಹಾಯಗಳು ನಿಂತುಹೋಗುತ್ತದೆ. ಮುಂದೆ ಪರಿಸ್ಥಿತಿ ಏನು? ನೀವು ನಿಮ್ಮ ಆಯವ್ಯಯದಲ್ಲಿ ನಿಗದಿಪಡಿಸುವ ಹಣದ ಪ್ರಮಾಣ ಬಹಳ ಕಡಿಮೆಯಾಗಿದ್ದು 200-300 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಈ ಹಣವನ್ನು ಬಿಡುಗಡೆ ಮಾಡುವುದಿಲ್ಲ. ನೀವು ಕೃಷ್ಣಾ ಭಾಗ್ಯ ಜಲ ನಿಗಮದ ಕಡೆ ಕೈ ತೋರಿಸುತ್ತಿದ್ದೀರಿ. ಸದರಿ ನಿಗಮವನ್ನು ಪ್ರಾರಂಭಿಸಿದ ರೀತಿಯ ವೇಗದಲ್ಲೇ ಹಣವನ್ನು ಸಂಗ್ರಹಿಸಲಿಲ್ಲ.

ಇದರ ಬಗ್ಗೆ ಪ್ರಧಾನ ಮಂತ್ರಿಗಳಾಗಿರುವವರು ಹೇಳಿರುವ ಉತ್ತರವನ್ನು ನಾವು ವಿರೋಧಿಸಿದ್ದೇವೆ. ಸೆಬಿ ಯಿಂದ ಅನುಮತಿ ಪಡೆದುಕೊಳ್ಳುವುದು ನಮಗೆ ಗೊತ್ತಿರಲಿಲ್ಲ, ಈಗ ಅನುಮತಿ ಪಡೆದುಕೊಂಡಿದ್ದೇವೆ ಎಂದು ಹೇಳಿರುವುದು ಉತ್ತರವಲ್ಲ. ದಯಮಾಡಿ ಹೆಚ್ಚು ಹಣವನ್ನು ಕ್ರೋಢೀಕರಿಸಿ ನಮ್ಮ ಪಾಲಿನ ನೀರಿನ ಮೇಲಿರುವ ಹಕ್ಕನ್ನು ಉಳಿಸಿಕೊಳ್ಳಲು ಪ್ರಯತ್ನ ಪಡಬೇಕು. ಇದರ ಜೊತೆಗೆ ಇವೊತ್ತು ರೈತರು ಕೂಡ ಜವಾಬ್ದಾರರಾಗಬೇಕಾಗುತ್ತದೆ. ಇವೊತ್ತು ಯಾವುದೇ ಭಾಗದ ಅಚ್ಚುಕಟ್ಟು ಪ್ರದೇಶದಲ್ಲಿ ಕಟ್ಟಕಡೆಯ ಭಾಗದಲ್ಲಿರುವ ರೈತರ ಜಮೀನುಗಳಿಗೆ ಸಂಪೂರ್ಣವಾಗಿ ನೀರಾವರಿ ಸೌಲಭ್ಯ ಒದಗಿಸಿಕೊಟ್ಟಿರುವುದರಿಂದ ಅವರ ಮೇಲೂ ಕರ ಭಾರ ಹಾಕಬೇಕಾಗುತ್ತದೆ ಮತ್ತು ಆ ಮೂಲಕ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಬೇಕು, ಇಲ್ಲದಿದ್ದರೆ ಸಂಪನ್ಮೂಲ ಬರಲು ಸಾಧ್ಯವಿಲ್ಲ. ಸುಮಾರು 30 ಲಕ್ಷದಿಂದ 50 ಲಕ್ಷ ಎಕರೆಗಳವರೆಗೆ ನೀರಾವರಿ ಸೌಲಭ್ಯ ಒದಗಿಸಿಕೊಡುವಂಥ ಈ ಯೋಜನೆಯಿಂದ ಏಕಕಾಲಕ್ಕೆ ಎಲ್ಲಾ ರೈತರಿಗೂ ಪ್ರಯೋಜನವಾಗುವಂಥ ಸಂದರ್ಭವಿರುವುದರಿಂದ ಆ ರೈತರುಗಳ ಮೇಲೆ ಕರಭಾರ ಹಾಕುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲದಿದ್ದರೆ, ಯಾವ ರೀತಿಯಿಂದಲೂ ಸಂಪನ್ಮೂಲ ಕ್ರೋಢೀಕರಿಸುವುದಕ್ಕಾಗುವುದಿಲ್ಲ. ಇನ್ನು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹಮ್ಮಿಕ್ಕೊಳ್ಳಲಾಗಿರುವ ಕಾರ್ಯಕ್ರಮಗಳನ್ನು ಚುರುಕುಗೊಳಿಸಲು ನಾನು ಒಂದು ಸಲಹೆ ಕೊಡುತ್ತೇನೆ. ಏನೆಂದರೆ, ಒಂದು ಉನ್ನತ ಮಟ್ಟದ ಸಮಿತಿಯ ರಚನೆ ಅಥವಾ ಒಂದು ಸಮಿತಿ ಮಾಡುವುದು ಸೂಕ್ತವೆಂದು ಹಿಂದಿನ ಸರ್ಕಾರದಲ್ಲಿಯೇ ಅದರ ಬಗ್ಗೆ ಪ್ರಸ್ತಾಪವಾಗಿ ಕಾರ್ಯಕ್ರಮವನ್ನು ಸಹ ಹಾಕಿಕೊಳ್ಳಲಾಗಿತ್ತು.

7 ಪ್ರಕಟಣೆ

MR. DEPUTY SPEAKER : I welcome his excellency Mr. Derren Perrett Gribble the Australian High Commissioner to India, who is witnessing the proceedings of the House from the Officers' gallery.